ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 13 ಜೂನ್ 10, 1979 40 ಪೈಸೆ

ಭೂಹೀನರಿಗೆ ಭೂಮಿ ಹಂಚಿಕೆ

ಅಕ್ರಮವಾಗಿ ಸ್ವಾಧೀನದಲ್ಲಿರುವ ಒಟ್ಟು 2,81 ಲಕ್ಷ ಎಕರೆ ಸರಕಾರಿ ಭೂಮಿಯನ್ನು ಖಾಯಂಗೊಳಿಸಲಾಗಿದೆಯೆಂದು ರಾಜ್ಯದ ಕಂದಾಯ ಸಚಿವ ಬಸವಲಿಂಗಪ್ಪನವರು ವಿಧಾನಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸುತ್ತಾ ಮೇ 31 ರಂದು ಹೇಳಿರುವರು. ಇದರಲ್ಲಿ 51000 ಎಕರೆ ಭೂಮಿ ಹಿಂದುಳಿದ ಜನಾಂಗದವರಿಗೆ ಕೊಡಲಾಗಿದೆ ಎಂದಿರುವರು. ಗ್ರಾಮ ಲೆಕ್ಕಾಧಿಕಾರಿಗಳ ಕೈಯಿಂದ ಈಗಿರುವ ಅಧಿಕಾರಗಳನ್ನು ತೆಗೆದು, ತಹಶೀಲ್ದಾರರವರಿಗೆ ಅಧಿಕಾರವನ್ನು ವಹಿಸಿಕೊಡಲಾಗುವುದು ಎಂದಿರುವರು. ಗ್ರಾಮ ಲೆಕ್ಕಾಧಿಕಾರಿಗಳಿಗೆ ರೆಕಾರ್ಡನ್ನು ಬರೆಯುವ ಮತ್ತು ನಕಲುಗಳನ್ನು ಕೊಡುವ ಅಧಿಕಾರಗಳಿರುವುದರಿಂದ, ಜನರನ್ನು ತೊಂದರೆಗೀಡುಮಾಡುವುದಕ್ಕೆ ಎಡೆಯಾಗಿದೆ ಎಂದಿರುವರು. ಅಂದರೆ ತಹಶೀಲ್ದಾರರವರಿಗೆ ಈ ಅಧಿಕಾರವನ್ನಿತ್ತರೆ ಇದು ತಪ್ಪಿದಂತಾಗುವುದು ಎಂದಂತಾಗಿದೆ.

ಆದರೆ ರೆವಿನ್ಯೂ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರ ಮತ್ತು ಮೋಸ ಹಾಗೂ ಈ ಇಲಾಖೆಯು ಯಜಮಾನ ವರ್ಗಗಳ ಪರವಾಗಿ ಕೆಲಸಮಾಡುತ್ತಿದೆ ಎಂದು ವಿಮರ್ಶಿಸಿದಲ್ಲಿ ಬಸವಲಿಂಗಪ್ಪನವರ ಈ ಕ್ರಮದಿಂದ ಜನರಿಗೆ ಪ್ರಯೋಜನವಾಗುವುದಕ್ಕಿಂತ, ಇನ್ನೂ ಹೆಚ್ಚಿನ ತೊಂದರೆಯಾಗುವುದೆಂಬುದು ಸ್ಪಷ್ಟ. ಇರುವ ಜವಾಬ್ದಾರಿಗಳನ್ನೇ ನಡೆಸಲು ಸಾಧ್ಯವಾಗದಿರುವ ತಹಶೀಲ್ದಾರರುಗಳಿಗೆ ಇನ್ನೂ ಹೆಚ್ಚಿನ ಜವಾಬ್ದಾರಿಗಳನ್ನಿತ್ತರೆ, ಕೆಲಸ ನಿಧಾನವಾಗುವುದು ಮಾತ್ರವಲ್ಲ ಬಹುಶಃ ಇವರಿಗೆ ಇನ್ನೂ ಹೆಚ್ಚಿನ ಲಂಚ ದೊರೆಯಲು ಎಡೆಮಾಡಿದಂತಾಗುವುದು. ಗ್ರಾಮ ಲೆಕ್ಕಾಧಿಕಾರಿಗಳು ಜನರನ್ನು ತೊಂದ

ಸಂಪಾದಕೀಯ

ರೆಗೀಡುಮಾಡುವರೆಂದು ಮಾನ್ಯ ಸಚಿವರೇ ಒಪ್ಪಿಕೊಂಡಿರುವರು. ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ಕೆಲಸವನ್ನು ಸರಿಯಾಗಿ ನಡೆಸಲೇಬೇಕೆಂಬುದು ನಿರ್ವಿವಾದ. ಆದರೆ ಇದು ಸಾಧ್ಯವಾಗಬೇಕಾದರೆ ಅಧಿಕಾರ ಹಸ್ತಾಂತರದಿಂದಲ್ಲ, ಬದಲು ಮೇಲಧಿಕಾರಿಗಳು ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ಕೊಡಬಾರದು. ಬಹಳ ಕಡೆ ಅಕಸ್ಮಾತ್ ಗ್ರಾಮ ಲೆಕ್ಕಾಧಿಕಾರಿ ಶ್ರಮಜೀವಿಗಳಿಗೆ ಅನುಕೂಲವಾಗಿ ವರ್ತಿಸಿರುವಾಗ ತಹಶೀಲ್ದಾರ ಮಟ್ಟ ಅಧಿಕಾರಿಗಳಿಂದಲೇ ಇದಕ್ಕೆ ವ್ಯತಿರಿಕ್ತವಾಗಿ ಕೆಲಸಮಾಡಲು ಆದೇಶ ಬಂದಿರುವುದು ಉಂಟು.

ಗ್ರಾಮ ಲೆಕ್ಕಾಧಿಕಾರಿಗಳು ಅಥವಾ ಯಾವ ಅಧಿಕಾರಿಗಳೇ ಇರಲಿ ಜನರಿಗೆ ಬೇಕಾದಂತೆ ಕೆಲಸಮಾಡಬೇಕಾದರೆ, ಜನತೆಯ ಅಭಿಪ್ರಾಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬರುವಂತಾಗಬೇಕು. ಪಶ್ಚಿಮ ಬಂಗಾಳದಲ್ಲಿನಂತೆ ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರವಿದ್ದು, ಗ್ರಾಮಪಂಚಾಯತ್ ಮಟ್ಟದಲ್ಲಿ ಶ್ರಮಜೀವಿಗಳ ಪ್ರಾತಿನಿಧ್ಯವು ಬಲಿಷ್ಟವಾಗಿದ್ದರೆ ಇದು ಸುಲಭಸಾಧ್ಯ. ರೆಕಾರ್ಡನ್ನು ಬರೆಯುವುದಿರಲಿ, ಭೂಮಿ ಹಂಚುವುದಿರಲಿ-ಇವನ್ನೆಲ್ಲಾ ಬಡರೈತ ಕೂಲಿಗಾರ ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳ ನಿಯಂತ್ರಣದಿಂದ ನಡೆಸಬೇಕು. ಆಗ ಮಾತ್ರ ಬಡರೈತ ಕೂಲಿಗಾರರಿಗೆ ಭೂಮಿ ದೊರೆಯುವುದು ಸಾಧ್ಯ.

ಮಾನ್ಯ ಕಂದಾಯ ಸಚಿವರು ಒಂದೆರಡು ವರ್ಷಗಳಿಂದ ಸರಕಾರಿ ಭೂಮಿಯಲ್ಲಿ ಅಕ್ರಮವಾಗಿ ವಾಸ ಮಾಡಿಕೊಂಡು ಬಂದವರನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸಲಾಗುವುದು ಎಂದು ಸಾರಿರುವರು. ಜಿಲ್ಲಾಧಿಕಾರಿಗಳಿಗೆ

[ಕೊನೆಯ ಪುಟ ನೋಡಿ]

ಆಲಿಘರ್‌ನಲ್ಲಿ ನಡೆಯುತ್ತಿರುವುದೇನು?

ಆಲಿಘರ್‌ನಲ್ಲಿ ವಿಧಿಸಲಾಗಿದ್ದ ಕರ್ಫ್ಯೂವನ್ನು ಮೇ 16 ರಿಂದ ಸಡಿಲಗೊಳಿಸಿದ್ದರೂ ಆರೆಸ್ಸೆಸ್ ಪ್ರಚೋದಿತ ಪ್ರಚಾರವು ನಗರವನ್ನು ಇನ್ನೂ ಕಲಕುತ್ತಿದೆ. ಸುಳ್ಳು ಸುದ್ದಿಗಳನ್ನು ಹರಡುವ ಕರಪತ್ರಗಳನ್ನು ಎಲ್ಲೆಲ್ಲೂ ಹಂಚಲಾಗುತ್ತಿದೆ. "ರಕ್ತಕ್ಕಾಗಿ ರಕ್ತ" ಎನ್ನುವಂತ ಉತ್ತೇಜಕ ಘೋಷಣೆಗಳನ್ನು ಗೋಡೆಗಳ ಮೇಲೆ ಬರೆಯಲಾಗಿದೆ. ಇವೆಲ್ಲವೂ ಅಲ್ಪಸಂಖ್ಯಾತರ ಕ್ಷೇಮಶಾಂತಿಗಳಿಗೆ ಇಡುತ್ತಿರುವ ಬೆಂಕಿಯಾಗಿದೆ.

ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯದ ಸ್ವರೂಪದ ವಿಚಾರವು ಇಷ್ಟೆಲ್ಲಾ ಕೋಮು ಕಲಹಗಳಿಗೆ ಕಾರಣವಾಗಿದ್ದು, ಸಾಮಾನ್ಯ ಜನತೆಗೆ ದುರಂತವನ್ನು ತರುತ್ತಿದೆ. ಜನತಾ ಸರ್ಕಾರದೊಳಗಿರುವ ಆರೆಸ್ಸೆಸ್ ಈ ಎಲ್ಲ ಗಲಭೆಗಳ ಹಿಂದೆ ಇದ್ದು ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯವು ರಾಷ್ಟ್ರೀಕೃತವಾಗಬೇಕೆಂದು ಒತ್ತಾಯಿಸುತ್ತಿದೆ.

ತನ್ನ ಚುನಾವಣಾ ಉದ್ದೇಶಗಳಿಗಾಗಿ ಜನತಾ ಪಕ್ಷ, ಮುಸ್ಲಿಮ್ ಕೋಮು ನಾಯಕರ ಜೊತೆ ಚೌಕಾಸಿ ಮಾಡುತ್ತಿದ್ದು, ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆಯಲ್ಲಿ ಅವರಿಗೆ ಕೆಲವು ರಿಯಾಯತಿಗಳನ್ನೂ ಕೊಟ್ಟಿದೆ. ಕಾಂಗ್ರೆಸ್ (ಐ), ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಈ ಅವಕಾಶವನ್ನು ಬಿಡದೆ ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯವನ್ನು ಸಂವಿಧಾನದ ಮುವ್ವತ್ತನೇ ಕಲಮಿನ ಪ್ರಕಾರ, ಒಂದು ಅಲ್ಪಸಂಖ್ಯಾತರ ಸಂಸ್ಥೆ ಎಂದು ಘೋಷಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಇವೆಲ್ಲದರ ಫಲವಾಗಿ ಹೊಸದಾಗಿ ಮತ್ತೆ ಮುಸ್ಲಿಮ್ ಕೋಮುವಾದ ತಲೆಯೆತ್ತಿದೆ. ವಿಶ್ವವಿದ್ಯಾಲಯದ ಉಪಕುಲಪತಿ ಇದನ್ನು ಚೆನ್ನಾಗಿ ಪೋಷಿಸುತ್ತಿದ್ದಾರೆ. ಸಮಾಜದ್ರೋಹಿ ಅಂಶಗಳಿಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಕೊಟ್ಟು ಅವರನ್ನು ಸಾಕುತ್ತಿದ್ದಾರೆ. ವಿಶ್ವವಿದ್ಯಾಲಯದ ಆವರಣದಲ್ಲಿ ಮತ್ತು ನಗರದಲ್ಲಿ ಕೊಲೆ, ಸುಲಿಗೆ, ದರೋಡೆಗಳು ಸಾಮಾನ್ಯ ಸಂಗತಿಯಾಗಿಬಿಟ್ಟಿವೆ.

ಮೇ 9 ರಂದು ಪ್ರದರ್ಶನ ನಡೆಸುವುದಕ್ಕಾಗಿ ದೆಹಲಿಗೆ ರೈಲಿನಲ್ಲಿ ತೆರಳುತ್ತಿದ್ದ ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ದಾದ್ರಿ ಸ್ಟೇಷನ್ನಿನಲ್ಲಿ ಹಲ್ಲೆ ನಡೆಸಲಾಗಿದೆ. ಈ ಕೃತ್ಯದ ಹಿಂದೆಯೂ ಆರೆಸ್ಸೆಸ್‌ನ ಕೈವಾಡವಿರುವ ಶಂಕೆ ಇದೆ. ಈ ಸುದ್ದಿ ತಿಳಿದ ನಂತರ ವಿಶ್ವವಿದ್ಯಾಲಯದ ವಾತಾವರಣ ಮತ್ತಷ್ಟು ಕದಡಿದೆ. ಸುತ್ತಲಿನ ಹಿಂದೂಗಳ ಅಂಗಡಿಗಳಿಗೆ ಬೆಂಕಿ ಹಚ್ಚುವ ಕೆಲಸ ನಡೆದು, ಮೇ 10 ರಂದು ಪೋಲೀಸರು ಗೋಲೀಬಾರ್ ನಡೆಸಬೇಕಾಯಿತು. ಅನೇಕ ದುಷ್ಕೃತ್ಯಗಳಿಗೆ ಪೋಲೀಸರು ಮೌನ ಸಮ್ಮತಿ ನೀಡುತ್ತಿದ್ದಾರೆ. ನಾಲ್ಕಾರು ಜನರು ಜೀವತೆತ್ತು ಪರಿಸ್ಥಿತಿ ಹದಗೆಟ್ಟಿದ್ದರಿಂದ ವಿಶ್ವವಿದ್ಯಾಲಯವನ್ನು ಮುಚ್ಚಲಾಗಿತ್ತು.

ಇದುವರೆಗೆ ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ಬಂದಿದ್ದ ಆಲಿಘರ್ ಮುಸ್ಲಿಮ್ ವಿಶ್ವವಿದ್ಯಾಲಯವು ಮತ್ತೆ ತನ್ನ ಹೆಸರನ್ನು ಸ್ಥಾಪಿಸಿಕೊಳ್ಳಬೇಕಾದರೆ ಅದರ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಯಾವುದೇ ಕೋಮು ರಾಜಕೀಯಕ್ಕೆ ಒಳಗಾಗದೆ ಗುರುತರ ಜವಾಬ್ದಾರಿ ವಹಿಸಬೇಕಾಗಿದೆ. ಅಲ್ಲದೆ ಸಮಾಜಘಾತುಕ ಶಕ್ತಿಗಳನ್ನು ಬಳಸಿಕೊಂಡು ಶಾಂತಿಯನ್ನು ಕದಡುತ್ತಿರುವ ಅಲ್ಲಿನ ಉನ್ನತ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದೂ ಅಗತ್ಯವಾಗಿದೆ. ●

ಕಾರ್ಮಿಕ ನಗರದಲ್ಲಿ ಮಾರ್ಕ್ಸ್‌ವಾದಿಗಳ ವಿಜಯ

ಉತ್ತರ ಕನ್ನಡ ಜಿಲ್ಲೆಯ ಕಾರ್ಮಿಕ ನಗರ ದಾಂಡೇಲಿಯು ಮುನ್ಸಿಪಲ್ ಚುನಾವಣೆಯಲ್ಲಿ ಹೊಸ ಚರಿತ್ರೆಯನ್ನೇ ಸ್ಥಾಪಿಸಿದೆ. ಗುತ್ತೇದಾರಿ ಬಂಡವಾಳಶಾಹಿ ಬಂಗೂರು-ಸೋಮಾನಿಯವರ ಮಾಲಕತ್ವದ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಲು ಮತ್ತು ಇತರ ಕೆಲವು ಉದ್ಯಮಗಳಿರುವ ದಾಂಡೇಲಿ, ಕೇವಲ ಉ.ಕ. ಜಿಲ್ಲೆಗೆ ಮಾತ್ರವಲ್ಲ, ರಾಜ್ಯದಲ್ಲಿ ಒಂದು ಮುಖ್ಯ ಕಾರ್ಮಿಕ ಕೇಂದ್ರವಾಗಿದೆ. ದಾಂಡೇಲಿಗೆ ಸಮೀಪವೇ ಕಾಳೀ ನದಿ ಯೋಜನೆಯೂ ಇದ್ದು, ದಾಂಡೇಲಿಯ ಪ್ರಾಮುಖ್ಯತೆಯು ಹೆಚ್ಚಾಗಿದೆ. 27.5.79ರಂದು ನಡೆದ ದಾಂಡೇಲಿ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಎಲ್ಲಾ 19 ಸ್ಥಾನಗಳಿಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸಲಾಗಿತ್ತು. ಈ ಪೈಕಿ 10 ಅಭ್ಯರ್ಥಿಗಳು ವಿಜಯಿಗಳಾಗಿದ್ದು, ನಿಚ್ಚಳ ಬಹುಮತವನ್ನು ಪಡೆಯಲಾಗಿದೆ. ವಿಜಯಿ ಅಭ್ಯರ್ಥಿಗಳಲ್ಲಿ ಕಾರ್ಮಿಕ ಮುಂದಾಳು ಕಾಂ. ಆರ್. ಜಿ. ಸ್ಥಳೇಕರ್, ಕಾಂ. ಜಿ. ವಿ. ಪವಾರ ಮೊದಲಾದವರಿರುವರು.

ವಿಜಯಿ ಅಭ್ಯರ್ಥಿಗಳ ವಿವರ ಈ ಕೆಳಗಿನಂತಿದೆ. ಕಾಂ. ಆರ್. ಜಿ. ಸ್ಥಳೇಕರ್, ಕಾಂ. ಜಿ. ವಿ. ಪವಾರ್, ಕಾಂ. ಎಸ್. ಕೆ. ಸಾವಂತ್, ಕಾಂ. ಎಮ್. ಎಮ್. ನಾಯ್ಕ್, ಕಾಂ. ಎಚ್. ಎಸ್. ನಾಯ್ಕ್, ಕಾಂ. ಎಮ್. ಆರ್. ನಾಯ್ಕ್, ಕಾಂ. ಎ. ಎಸ್. ಖಾನ್, ಕಾಂ. ಶಾಂತ್, ಕಾಂ. ಅಗ್ನೇಶ್ ಬರೆಟ್ಟೊ, ಕಾಂ. ಕಾಂತಿಕಿರಣ್.

ಹತ್ತೊಂಬತ್ತು ಸ್ಥಾನಗಳಲ್ಲಿ ಇಂದಿರಾ ಕಾಂಗ್ರೆಸ್‌ಗೆ ಒಂದು ಸ್ಥಾನವೂ, ಜನತಾಕ್ಕೆ ಮೂರು ಸ್ಥಾನಗಳೂ, [illegible] ಕಾಂಗ್ರೆಸ್ಸಿಗೆ ಒಂದು ಸ್ಥಾನವೂ, ಸ್ವತಂತ್ರ ಅಭ್ಯರ್ಥಿಗಳು ನಾಲ್ಕು ಸ್ಥಾನಗಳನ್ನು ಗೆದ್ದಿರುವರು.

ರಾಜ್ಯದ ಇತರ ಕೆಲವೆಡೆಗಳಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಉಮೇದ್ವಾರರುಗಳು ಸ್ಪರ್ಧಿಸಿದ್ದು ಫಲಿತಾಂಶಗಳ ವಿವರ ಈ ಕೆಳಗಿನಂತಿದೆ—

ಹಳಿಯಾಳ :

ಉತ್ತರ ಕನ್ನಡದ ಹಳಿಯಾಳ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದು, ತಾಲ್ಲೂಕು ರೈತರ ಸೇವಾಸಹಕಾರಿ ಸಂಘದ ಅಧ್ಯಕ್ಷ ಕಾಂ. ಬಸಣ್ಣನಾಗೇಶ್ ಪಟ್ಟೇಕರರವರು ಆಯ್ಕೆಯಾಗಿದ್ದಾರೆ.

ಬೀದರ :

ಬೀದರದಲ್ಲಿ ಇಬ್ಬರು ಸ್ಪರ್ಧಿಸಿದ್ದು ಕಾಂ. ಸುಂದರರಾಜ್ ಅವರು ಅತೀ ಹೆಚ್ಚು ಮತಗಳನ್ನು ಪಡೆದು ಜಯಗಳಿಸಿದ್ದಾರೆ.

ಸುಳ್ಯ :

ದ.ಕ. ಜಿಲ್ಲೆಯ ಸುಳ್ಯದಲ್ಲಿ ಎಂಟು ಸ್ಥಾನಗಳಿಗೆ ಪಕ್ಷದ ಉಮೇದ್ವಾರರು ಸ್ಪರ್ಧಿಸಿದ್ದು, ಎರಡು ಸ್ಥಾನಗಳಲ್ಲಿ ಆಯ್ಕೆಯಾಗಿರುವರು. ಕಾಂ. ಪಿ. ಕೆ. ಮೂಸ, ಮತ್ತು ಕಾಂ. ನಾವೂರು ಕೆಂಚಿಲ ಇವರು ಆಯ್ಕೆಯಾಗಿದ್ದು, ಮೊದಲ ಬಾರಿಗೆ ಸುಳ್ಯ ಪುರಸಭೆಗೆ ಮಾರ್ಕ್ಸ್‌ವಾದಿಗಳ ಪ್ರವೇಶವಾದಂತಾಗಿದೆ.

ಕುಣಿಗಲ್ :

ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಜನತಾಪಕ್ಷದೊಂದಿಗೆ ಹೊಂದಾಣಿಕೆ ಮಾಡಿದ್ದು, ಪಕ್ಷದಿಂದ 5 ಸ್ಥಾನಗಳಿಗೆ ಸ್ಪರ್ಧಿಸಲಾಗಿತ್ತು. ಈ ಪೈಕಿ ಮೂರು ಸ್ಥಾನಗಳಲ್ಲಿ ಪಕ್ಷದ ಅಭ್ಯರ್ಥಿಗಳು ವಿಜ

[ಕೊನೆಯ ಪುಟ ನೋಡಿ]

ಮಾಲೀಕರುಗಳಲ್ಲಿ ಒಳ್ಳೆಯವರು ಕೆಟ್ಟವರೆಂದು ವಿಭಾಗಿಸುವುದಕ್ಕಿಂತ ಹೋಟೆಲಿನಿಗಿಂತ ಬಿರಿತ ಉತ್ತಮವೆಂಬಂತಾಗುವುದು.

ಇಂದಿನ ಅವ್ಯವಸ್ಥೆಯುಳ್ಳ ಬಂಡವಾಳಶಾಹಿ ಸಮಾಜದಲ್ಲಿ ಬಡವ ಶ್ರೀಮಂತನಾಗಬೇಕೆಂದೂ, ಶ್ರೀಮಂತ ಮತ್ತೂ ಶ್ರೀಮಂತನಾಗಬೇಕೆಂದೂ, ಅಥವಾ ಪ್ರತಿಯೊಬ್ಬರೂ ಯಾವುದಾದರೂ ಒಂದು ರೀತಿಯಲ್ಲಿ ಐಶ್ವರ್ಯವಂತರಾಗಬೇಕೆಂಬ ವೈಯಕ್ತಿಕ ಹಂಬಲದಲ್ಲಿ ಹಗಲು ಕನಸು ಕಾಣುವುದು ಸ್ವಾಭಾವಿಕ. ಸಾಮಾಜಿಕವಾಗಿ ಉತ್ಪನ್ನವಾಗುವ ಸರಕುಗಳನ್ನು ಸಮಾಜಕ್ಕೆ ಸರಿಸಮಾನವಾಗಿ ಹಂಚದೆ, ಮಾರಲೆಂದು ಕೆಲವೇ ವ್ಯಕ್ತಿಗಳು ಹಗಲು ದರೋಡೆ ನಡೆಸಿ ಕೂಡಿಟ್ಟುಕೊಳ್ಳುವುದೇ ಐಶ್ವರ್ಯ ಮತ್ತು ಶ್ರೀಮಂತಿಕೆ. ಹಾಗೆ ಮಾಡಲು ಎಲ್ಲರಿಗೂ ಅಸಾಧ್ಯವಾದ ಕಾರಣ, ಬಹುಸಂಖ್ಯಾತ ಜನರು ಬಡವರೇ ಇರುವರು. ಈ ಚಾರಿತ್ರಿಕ ಸತ್ಯತೆಯನ್ನರಿಯದವರು ತಮ್ಮ ಇಂದಿನ ಕಷ್ಟಕಾರ್ಪಣ್ಯಗಳಿಗೆ ಪೂರ್ವಜನ್ಮದ ಕರ್ಮಗಳೇ ಕಾರಣವೆಂದು ನಂಬುವಂತೆ, ಮಾಲೀಕರಲ್ಲಿ ಒಳ್ಳೆಯವರು, ಕೆಟ್ಟವರೆಂದು ನಂಬುತ್ತಾ ಯಾವುದೇ ಮಾಲೀಕನಲ್ಲೂ ಮಾನವತೆಯನ್ನು ಕಾಣಲಾರದೆ ದಶಕದಲ್ಲಿ ಬೃಹತ್ ಚಳುವಳಿಗೆ ಸಂಘಟಿತವಾಗುವುದರಲ್ಲಿಯೇ ರಾತ್ರೋರಾತ್ರಿ ಬಾರಿ ಪ್ರಮಾಣದಲ್ಲಿ ಲಾಠಿ ಚಾರ್ಜ್ ನಡೆಸಿ ಕಾರ್ಮಿಕರನ್ನು ಛಿದ್ರಿಸಲಾಗಿತ್ತು. ಮಾರನೇ ದಿನವೇ ಪ್ರತೀ ಮಾಂಸಾಹಾರಿ ಹೋಟೆಲಿನಲ್ಲೂ ದಿನಗೂಲಿಯ ಬೋರ್ಡುಗಳು (DAILY WAGE) ಕಾಣಿಸಿಕೊಂಡು ಬೆಳಿಗ್ಗೆ ಕೆಲಸಗಾರರನ್ನು ತೆಗೆದುಕೊಂಡು ರಾತ್ರಿ ಹೊರಕಳುಹಿಸುವುದು, ರಾತ್ರಿ ಕೆಲಸಕ್ಕೆ ತೆಗೆದುಕೊಂಡು ಬೆಳಿಗ್ಗೆ ಕಳುಹಿಸಿಬಿಡುವುದು ಪ್ರಾರಂಭವಾಯಿತು. ಚಳುವಳಿಯ ಪರಿಣಾಮ ಮಾಲೀಕರುಗಳು ಸೂತ್ರಗಳನ್ನು ಹುಡುಕಿದರು. ಮಾಂಸಾಹಾರಿ ಹೋಟೆಲು ಕಾರ್ಮಿಕರು ಈ ವರ್ಷ ಮೇ ದಿನವನ್ನು ಬೇಡಿಕೆಯ ದಿನವನ್ನಾಗಿ ಆಚರಿಸಿದರು. ಮೇ ದಿನ ಬೆಳಗಿನ ಜಾವ ನಾಲ್ಕು ಘಂಟೆಗೆಲ್ಲಾ ಕಾರ್ಮಿಕರ ಕ್ರಾಂತಿಕಾರಿ ಘೋಷಣೆಗಳು ನಗರದ ಮೂಲೆ ಮೂಲೆಯಿಂದಲೂ ಕೇಳಿ ಬಂದು ನಗರದ ಜನತೆ ನಿದ್ರೆಗಣ್ಣಿನಲ್ಲಿ ಬಂದು ವೀಕ್ಷಿಸುವಂತೆ ಮಾಡಿತು. ಎಲ್ಲಾ ಮಾಂಸಾಹಾರಿ ಹೋಟೆಲುಗಳೂ ಮುಚ್ಚಲ್ಪಟ್ಟಿದ್ದುವು. ಈ ಚಳುವಳಿಯ ಪರಿಣಾಮ ಕಾರ್ಮಿಕರ ಸಂಘಕ್ಕೂ ಮತ್ತು ಮಾಲೀಕರ ಸಂಘಕ್ಕೂ ಒಂದು ಒಪ್ಪಂದವಾಗಿದೆ. ಅದರಲ್ಲಿ ಚಳುವಳಿಯಲ್ಲಿ ಭಾಗವಹಿಸಿದ ಕಾರ್ಮಿಕರನ್ನು ತೆಗೆಯುವುದಿಲ್ಲ ಸಾಮಾನ್ಯವಾಗಿ ಹೋಟೆಲುಗಳಲ್ಲಿ ಮೊದಲು ಚಳುವಳಿ ಹೂಡುವವರು ಸಪ್ಲೈಯರುಗಳೇ.

ನೂರು ಕಾರ್ಮಿಕರಿದ್ದ ಕಡೆ ಇಪ್ಪತ್ತೈದು ಕಾರ್ಮಿಕರು ಸಾಕು. ಅಧಿಕ ವ್ಯಾಪಾರ ಮೊದಲಾದರೆ ಗಿರಾಕಿಗಳು ಉಪಹಾರವಾದ ನಂತರ ಹಣ ಕೊಡಬೇಕಿತ್ತು. ಪ್ರತಿ ಗಿರಾಕಿಯ ಮೇಲೂ ಹಣ ಕೊಡುವವರೆವಿಗೂ ಕಣ್ಣಿಟ್ಟು ಕಾಯಬೇಕಿತ್ತು. ಹೋಟೆಲಿಗೆ ಬರುವ ಗಿರಾಕಿಗಳೆಲ್ಲಾ ಸಾಚಾ ಎನ್ನುವಂತಿಲ್ಲ. ಬಿಲ್ಲು ಕೊಡದೇ ಹೊರ ಹೋಗುವ ಸಂಭವಗಳೂ ಉಂಟು.

ಗಿರಾಕಿಗಳು ಉಪಹರಿಸಿದ ನಂತರ ಬೀಡಿ ಸಿಗರೇಟು ಸೇದುತ್ತಾ ಕಾಲ ಕಳೆಯುವಂತಿಲ್ಲ. ಸ್ಥಳಾಭಾವದಿಂದ ಇತರ ಗಿರಾಕಿಗಳು ಬೇರೆ ಹೋಟೆಲುಗಳಿಗೆ ಹೋಗುವಂತಿಲ್ಲ. ಸಪ್ಲೈಯರು ಗಿರಾಕಿಗಳನ್ನು ತೋರಿಸಿ ಸೇವೆ ಮಾಡುವಾಗ ಗಿರಾಕಿ ಅದು ಸರಿ ಇಲ್ಲ ಇದು ಸರಿ ಇಲ್ಲ, ಉಪ್ಪಿಲ್ಲ, ಖಾರ ಜಾಸ್ತಿ ಹೀಗೆಲ್ಲಾ ತರಲೆ ಎಬ್ಬಿಸುತ್ತಿದ್ದ ಗಿರಾಕಿ, ಸ್ವಸಹಾಯ ಪದ್ಧತಿಯಲ್ಲಿ ಮೊದಲೇ ಹಣಕೊಟ್ಟು ಬಾಯಿ ಮುಚ್ಚಿಕೊಂಡು ತ್ವರಿತ ಸೇವೆ ಮಾಡಿಕೊಳ್ಳುವನು. ತಿಂಡಿ ಕಾಫಿಗಳಲ್ಲಿ ತಾನು ಕೊಟ್ಟ ಹಣಕ್ಕೆ ಪ್ರಾಮಾಣಿಕತೆ ಇಲ್ಲದಿದ್ದರೂ ಹಣ ಮೊದಲೇ ಕೊಟ್ಟ ಮತ್ತು ದೊಡ್ಡ ಹೋಟೆಲುಗಳಿಗೆ ಸೇರಿದ ಎಲ್ಲಾ ಕಾರ್ಮಿಕರೂ ಒಂದು ಸೇರಿ ಹೊಸ ಸ್ಫೂರ್ತಿಯಿಂದ ಹೋರಾಡಬೇಕಾಗಿದೆ. ಸ್ವಂತ ಉದ್ಯೋಗ ಮಾಡುವ ಸಣ್ಣ ಪುಟ್ಟ ಹೋಟೆಲುಗಳ ಹೊರತು ಇನ್ನೆಲ್ಲಾ ಹೋಟೆಲುಗಳ ಕಾರ್ಮಿಕರು ಒಂದಾಗಿ ನಗರದ ಎಲ್ಲಾ ಹೋಟೆಲುಗಳ ಮಾಲೀಕರ ವಿರುದ್ಧ ಹೋರಾಡಬೇಕು. ನಗರದ ಎಲ್ಲಾ ಹೋಟೆಲುಗಳು ಮುಚ್ಚುವಂತಹ ಪರಿಸ್ಥಿತಿ ಬರಬೇಕು.

ದಿನೇ ದಿನೇ ಕೈಗಾರಿಕೀಕರಣವಾಗುತ್ತಿರುವ ಈ ಕಾಲಘಟ್ಟದಲ್ಲಿ ಸಹಸ್ರ ಗಟ್ಟಲೆ ಜನಗಳು ಪ್ರತಿದಿನವೂ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ನಗರದ 75 ಭಾಗ ಜನಸಂಖ್ಯೆ ಹೋಟೆಲ್‌ನ ಊಟ-ತಿಂಡಿಯಲ್ಲೇ ಅವಲಂಬಿತವಾಗಿದ್ದಾರೆ. ಹೋಟೆಲುಗಳೆಲ್ಲಾ ಮುಚ್ಚುವ ಪರಿಸ್ಥಿತಿ ಬಂದಾಗ ಅದರಿಂದಾಗುವ ಪರಿಣಾಮ ಮಹತ್ವದ್ದಾಗಿರುತ್ತದೆ. ಆಗ ಹೋಟೆಲ್ ಕಾರ್ಮಿಕರ ಕಳೆದಿಪ್ಪತ್ತು ವರುಷಗಳ ಹೋರಾಟಗಳಿಗೆ ಚಾರಿತ್ರಿಕ ತಿರುವು ಬರುವುದು, ಬೇಡಿಕೆಗಳೂ ಸ್ವಲ್ಪ ಮಟ್ಟಿಗೆ ಈಡೇರುವುದೂ ಸಾಧ್ಯ. ●

ಹೋಟೆಲು ಕಾರ್ಮಿಕರ ಹೋರಾಟದ ಬಗ್ಗೆ

—ಎಸ್. ಶಿವರಾಂ

ದುಡಿದೂ, ದುಡಿದೂ ಕೊನೆಗೆ ವೃದ್ಧಾಪ್ಯದಲ್ಲಿ ಸಮಾಜಕ್ಕೆ ಬೇಡವಾದವರಾಗುವರು.

ಬೆಂಗಳೂರಿನಲ್ಲಿ ಮಾಂಸಾಹಾರಿ ಹೋಟೆಲ್ ಮಾಲೀಕರುಗಳಿಗಿಂತ ಸಸ್ಯಾಹಾರಿ ಹೋಟೆಲ್‌ಗಳ ಮಾಲೀಕರು ಉತ್ತಮವೆಂದು ಮಾಂಸಾಹಾರಿ ಹೋಟೆಲುಗಳ ಕೆಲವು ಕಾರ್ಮಿಕರು ನಂಬುತ್ತಾರೆ. ಏಕೆಂದರೆ ಕಳೆದೆರಡು ದಶಕಗಳಿಂದ ಆಗಾಗ್ಗೆ ಸಸ್ಯಾಹಾರಿ ಕಾರ್ಮಿಕರು ನಡೆಸಿರುವ ಬೃಹತ್ ಹೋರಾಟಗಳನ್ನೂ, ಬೇಡಿಕೆಗಳನ್ನೂ ಹತ್ತಿಕ್ಕಿರುವ ಈ ಮಾಲೀಕರುಗಳ ಕುಯುಕ್ತಿಗಳ ಬಗ್ಗೆ ಅರಿಯದಿರುವುದು ಇಂತಹ ಭ್ರಮೆಗಳಿಗೆ ಕಾರಣ.

ಕಳೆದಿಪ್ಪತ್ತು ವರುಷಗಳಿಂದ ಮಾಂಸಾಹಾರಿ ಹೋಟೆಲ್ ಕಾರ್ಮಿಕರಿಗಿಂತ ಸಸ್ಯಾಹಾರಿ ಹೋಟೆಲ್ ಕಾರ್ಮಿಕರು ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಹೆಚ್ಚಿನ ಹೋರಾಟ ನಡೆಸಿದ್ದಾರೆ. ಈ ಹೋರಾಟವನ್ನು ಕಾನೂನಿನಡಿಯಲ್ಲೇ ಕಾರ್ಕಶವಾಗಿ ಮುರಿದಿಕ್ಕಲಾಗಿದೆ.

ಮಾಂಸಾಹಾರಿ ಹೋಟೆಲ್ ಕಾರ್ಮಿಕರು ಮಾಲೀಕರ ವಿರುದ್ಧ ಹೋರಾಟ ಮಾಡುವುದಿಲ್ಲವೆಂದಲ್ಲ. ಆದರೆ ಹೆಚ್ಚಿನವರು ಸ್ಥಳೀಯರಲ್ಲ, ಭಾಷಾ ಸಮಸ್ಯೆ ಬೇರೆ. ಈ ಕಾರ್ಮಿಕರು 1960ರ ವೆಂಬುದು ಮುಖ್ಯವಾದುದು. ಆದರೆ ಈಗ ಕಾರ್ಮಿಕರನ್ನು ಕಿತ್ತುಹಾಕಲಾಗುತ್ತಿದೆ.

ಹೆಚ್ಚಿನ ಮಧ್ಯ ಮತ್ತು ಬೃಹತ್ ಸಸ್ಯಾಹಾರಿ ಹೋಟೆಲ್‌ಗಳಲ್ಲಿ ಕಾರ್ಮಿಕರ ದಾಖಲೆಗಳೇನೋ ಇವೆ. ಆದರೆ ಹತ್ತಾರು ವರುಷಗಳು ದುಡಿದ ಕಾರ್ಮಿಕರು ಇಲ್ಲಿ ತರಬೇತಿ (APPRENTICE) ಕಾರ್ಮಿಕರಾಗಿಯೇ ಉಳಿದಿದ್ದಾರೆ. ಕೆಲವು ಹೋಟೆಲುಗಳಲ್ಲಿ ಕೆಲವೇ ಕಾರ್ಮಿಕರು ಸರ್ವೀಸ್ ಮಾಡಿರುವವರಿರುವರಾದರೂ ಪ್ರತಿಫಲವಿರುವುದಿಲ್ಲ. ಅದಕ್ಕಾಗಿ ಕಟ್ಟಳೆ ಹೂಡಿದರೆ ಹತ್ತಾರು ವರುಷಗಳು ನ್ಯಾಯಕ್ಕಾಗಿ ಅಲೆಯಬೇಕಾಗುವುದು. ನ್ಯಾಯಾಲಯಗಳಲ್ಲಿ ನ್ಯಾಯ ಯಾರ ಕಡೆಯಾಗುವುದೋ ಹೇಳಲು ಬರುವುದಿಲ್ಲ.

ಕೆಲವು ಸಸ್ಯಾಹಾರಿ ಹೋಟೆಲುಗಳ ಮಾಲೀಕರುಗಳು ಕಾರ್ಮಿಕರ ಹೋರಾಟಗಳನ್ನು ದುರುಪಯೋಗಪಡಿಸಿಕೊಂಡು ಸಾರ್ವಜನಿಕರನ್ನು ಹಗಲು ದರೋಡೆ ಮಾಡುವ ಹುತ್ತೊಂದು ಮಾರ್ಗವನ್ನು ಕಂಡುಕೊಂಡಿದ್ದಾರೆ. ಅದೆಂದರೆ ಸ್ವಸಹಾಯ ಪದ್ಧತಿ (SELF-SERVICE) ಹೆಚ್ಚಿಗೆ ಕೆಲಸಗಾರರು ಅವಗತ್ಯ ಎನ್ನುವುದಕ್ಕಿಂತ ಸಪ್ಲೈಯರುಗಳು ಬೇಕಿಲ್ಲ. ಏಕೆಂದರೆ ಸಂಕಟದಿಂದ ಗಪ್‌ಚುಪ್ಪಾಗಿ ಹೊರ ಹೋಗುವನು. ಅಷ್ಟೇ ಅಲ್ಲ ಇಡ್ಲಿ ಸಾಂಬಾರ್ ಟಿಕೆಟ್ಟಿಗಾಗಿ, ತಮ್ಮ ನೆಚ್ಚಿನ ನಾಯಕನ ಚಿತ್ರವನ್ನು ಮೊದಲು ನೋಡಲು ಸಿನಿಮಾ ಪ್ರೇಕ್ಷಕರು ನುಗ್ಗುವಂತೆ ಇಲ್ಲಿಯೂ ಗಿರಾಕಿಯ ಪರಿಸ್ಥಿತಿ. ಒಂದುಬಾರಿ ನೂರು ಜನರಿಗೆ ಸೇವೆ ಮಾಡುತ್ತಿದ್ದ ಹೋಟೆಲುಗಳು ಸ್ವಸಹಾಯ ಪದ್ಧತಿಯಲ್ಲಿ ಅದೇ ಸಮಯದಲ್ಲಿ ಸಾವಿರ ಗಿರಾಕಿಗಳನ್ನು ತುಂಬಿಸಿಕೊಳ್ಳುತ್ತವೆ. ಗಿರಾಕಿಗಳು ಸ್ವಂತ ಸಹಾಯ ಮಾಡಿದರೂ ಬೆಲೆಗಳಲ್ಲಿ ಇಳಿತಾಯವಿಲ್ಲ.

ಪ್ರಸ್ತುತ ಎಲ್ಲೆಲ್ಲಿ ಸಾರ್ವಜನಿಕರನ್ನು ದೋಚುವ ಮತ್ತು ಕಾರ್ಮಿಕ ಸಂಖ್ಯೆಯನ್ನು ಮೊಟಕುಗೊಳಿಸಿ ಹೆಚ್ಚಿನ ನಿರುದ್ಯೋಗಕ್ಕೆ ಕಾರಣವಾಗುವ ಸ್ವಸಹಾಯ ಪದ್ಧತಿಗಳಿವೆಯೋ ಅವಲ್ಲಿ ಹೆಚ್ಚಿನವು ಕಾರ್ಮಿಕರ ಹೋರಾಟಗಳನ್ನು ಮುರಿದಿರುವ ಹೋಟೆಲುಗಳಾಗಿವೆ. ಸುಮಾರು ಎರಡು ದಶಕಗಳಿಂದ ನಗರದಲ್ಲಿ ಹೋಟೆಲು ಕಾರ್ಮಿಕರ ಹೋರಾಟ ನಡೆದು ಬಂದರೂ, ಹೋಟೆಲು ಕಾರ್ಮಿಕರ ಸಮಸ್ಯೆಗಳು ತೀರಿಲ್ಲ. ಹಲವಾರು ಬೃಹತ್ ಚಳವಳಿಗಳು ನಡೆದಿವೆ. ಆದರೆ ಸಸ್ಯಾಹಾರಿ ಮತ್ತು ಮಾಂಸಾಹಾರಿ ವಿಭಾಗಕ್ಕೆ ಸೇರಿದ ಮಧ್ಯ

ಗುಡಿಸಲು ನಿವಾಸಿಗಳ ಹೋರಾಟಕ್ಕೆ ಎಸ್. ಎಫ್. ಐ. ಬೆಂಬಲ

ಬೆಂಗಳೂರು ನಗರದ ಜನತಂಕರಿ ಸಮೀಪ ಇರುವ ನಾಗಲಕ್ಷ್ಮೀನಗರದ ಸುಮಾರು 563 ಗುಡಿಸಲುಗಳನ್ನು ದಿನಾಂಕ 3-4-79 ರಂದು ಕೊಳಚೆ ಇಲಾಖೆಯ ಅಧಿಕಾರಿಗಳು ಪೋಲೀಸ್ ನೆರವಿನಿಂದ ಪೂರ್ಣ ಧ್ವಂಸ ಮಾಡಿದ್ದಾರೆ. ಅಲ್ಲಿಯ ಸುಮಾರು 3,000 ಜನಗಳನ್ನು ಬೀದಿಪಾಲು ಮಾಡಿದ್ದಾರೆ. ಈ ಜನತೆಯು ಕಾಂಗ್ರೆಸ್ (ಐ) ಶಾಸಕರಿಂದ ವಂಚಿತರಾಗಿ ಸರ್ಕಾರದ ದಬ್ಬಾಳಿಕೆಗೆ ಒಳಗಾಗಿದ್ದಾರೆ. ಗುಡಿಸಲು ವಾಸಿಗಳು ಸರ್ವಸ್ವವನ್ನು ಕಳೆದುಕೊಂಡು, ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಆರೋಗ್ಯ ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರದ ಈ ಅಮಾನವೀಯ ಕೃತ್ಯವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (S. F. I.) ನ ಬೆಂಗಳೂರು ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಅವರಿಗೆ ನ್ಯಾಯ ಸಮ್ಮತವಾಗಿ ಕೊಡಬೇಕಾದ ಬದಲಿ ಸ್ಥಳ ಮತ್ತು ಇತರೇ ವ್ಯವಸ್ಥೆಯನ್ನು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಜಾರಿಗೊಳಿಸಬೇಕೆಂದು ಫೆಡರೇಷನ್ ಒತ್ತಾಯಿಸುತ್ತದೆ.

ಈಗಾಗಲೇ ದಿನಾಂಕ 28-5-79 ರಿಂದ ಗುಡಿಸಲು ನಿವಾಸಿಗಳು, ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರರ ಕಚೇರಿಯ ಮುಂದೆ ನಡೆಸುತ್ತಿರುವ ಸರದಿ ಉಪವಾಸ ಸತ್ಯಾಗ್ರಹಕ್ಕೆ ಬೆಂಬಲವನ್ನು ನೀಡಿ ಎಸ್. ಎಫ್. ಐ. ನ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಗೋಪಾಲಕೃಷ್ಣ, ಸದಸ್ಯ ಕಾಂ. ರಾಜಣ್ಣ, ರಾಜ್ಯ ಸಮಿತಿ ಖಜಾಂಚಿ ಕಾಂ. ಉದಯಕುಮಾರ್, ಸದಸ್ಯ ಜನಕರಾಜ ಮೊದಲಾದವರು ದಿನಾಂಕ 5-6-79 ರಂದು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು ಹಾಗೂ ಪ್ರಜಾಪ್ರಭುತ್ವವಾದಿಗಳೂ ಈ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಎಸ್.ಎಫ್.ಐ. ನ ಬೆಂಗಳೂರು ಜಿಲ್ಲಾ ಸಮಿತಿ ವಿನಂತಿಸುತ್ತದೆ.

ನಾಗಲಕ್ಷ್ಮೀನಗರದ ಗುಡಿಸಲು ನಿವಾಸಿಗಳ ಹೋರಾಟಕ್ಕೆ ಜಯವಾಗಲಿ. ●

ಹತ್ತಿಗಿರಣಿ ಕಾರ್ಮಿಕರಿಂದ ಸಾಂಕೇತಿಕ ಮುಷ್ಕರ


ರಾಷ್ಟ್ರೀಯ ಹತ್ತಿಗಿರಣಿ ಕಾರ್ಪೊರೇಷನ್ (ಎನ್. ಟಿ. ಸಿ.) ನಡೆಸುತ್ತಿರುವ ನಗರದ ಮೈಸೂರು ಮಿಲ್ಲು ಮತ್ತು ಮಿನರ್ವಾ ಮಿಲ್ಲುಗಳ ಸುಮಾರು ಆರು ಸಾವಿರ ಕಾರ್ಮಿಕರು ತಾ. 13-6-79 ರಿಂದ ಸಾಂಕೇತಿಕ ಮುಷ್ಕರ ನಡೆಸಲಿದ್ದಾರೆ.

ಮೇಲ್ಕಾಣಿಸಿದ ಎರಡೂ ಕಾರ್ಖಾನೆಗಳ ವಿವಿಧ ಕಾರ್ಮಿಕ ಸಂಘಟನೆಗಳು ಒಂದಾಗಿ, ಎನ್. ಟಿ. ಸಿ. ಮಿಲ್ಲುಗಳಲ್ಲಿ ಕೆಲಸ ಮಾಡುತ್ತಿರುವ ಇತರ ರಾಜ್ಯಗಳ ಕೆಲಸಗಾರರು ತಿಂಗಳಿಗೆ ರೂ. 500 ಪಡೆಯುತ್ತಿರುವಾಗ, ಕರ್ನಾಟಕದಲ್ಲಿ ತಿಂಗಳಿಗೆ ಕೇವಲ ರೂ. 370 ಪಡೆಯುತ್ತಿರುವುದನ್ನು ಕೇಂದ್ರ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಅಲ್ಲದೆ, ಸಭೆ, ನಿಯೋಗ ಮುಂತಾದ ಕಾರ್ಯಕ್ರಮಗಳ ಮೂಲಕ ಬೇಡಿಕೆ ಸಪ್ತಾಹ ನಡೆಸುತ್ತಿದೆ. ಆದರೂ ವೇತನ ವಿಮರ್ಶೆಯ ಬಗ್ಗೆ ಆಡಳಿತ ವರ್ಗದವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿಲ್ಲ.

ಸಾಂಕೇತಿಕ ಮುಷ್ಕರದ ನಂತರ, ವಿವಿಧ ಸಂಘಗಳ ಸಮನ್ವಯ ಸಮಿತಿ, ಗುಲ್ಬರ್ಗಾ ಮತ್ತು ದಾವಣಗೆರೆಗಳಲ್ಲಿರುವ ಎನ್. ಟಿ. ಸಿ. ಮಿಲ್ಲುಗಳ ಕಾರ್ಮಿಕ ಪ್ರತಿನಿಧಿಗಳನ್ನು ಭೇಟಿ ಮಾಡಿ, ಕರ್ನಾಟಕದಾದ್ಯಂತ ಚಳುವಳಿ ನಡೆಸಲು ಕಾರ್ಯಕ್ರಮ ಹಾಕಲಿದೆ. ●

ರಾಜ್ಯದ ವಿವಿಧ ಕಡೆಗಳಲ್ಲಿ ದುಡಿಯುವ ಮಹಿಳೆಯರ ಬೇಡಿಕೆ ದಿನಾಚರಣೆ



ದುಡಿಯುವ ಮಹಿಳೆಯರ ಬೇಡಿಕೆ ದಿನಾಚರಣೆಯಂದು ಬೆಂಗಳೂರು ನಗರದಲ್ಲಿ ನಡೆದ ಮೆರವಣಿಗೆಯ ದೃಶ್ಯ.

ದುಡಿಯುವ ಮಹಿಳೆಯರ ಬೇಡಿಕೆ ದಿನಾಚರಣೆಯನ್ನು ಬಿಜಾಪುರದ ನಗರ ಮುನಿಸಿಪಲ್ ಅಧ್ಯಕ್ಷರಾದ ಜಿ. ಕೆ. ಬಸವಪ್ರಭು ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಮುನಿಸಿಪಲ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕೌನ್ಸಿಲರ್ ಶ್ರೀಮತಿ ಆರ್. ಎಸ್. ಬಾಳ್ಬಟ್ಟಿ ಅವರು ಮಾತನಾಡಿ ದುಡಿಯುವ ಮಹಿಳೆಯರ ಬೇಡಿಕೆಗಳನ್ನು ವಿವರಿಸಿದರು. ಕಾರ್ಮಿಕ ನಾಯಕ ಎನ್. ಕೆ. ಉಪಾಧ್ಯಾಯ ಅವರು ಮಾತನಾಡಿ, ಬೇಡಿಕೆ ದಿನಾಚರಣೆಯ ಮಹತ್ವ ವಿವರಿಸಿ ಭಾರತದಲ್ಲಿ ಪ್ರಥಮವಾಗಿ ದುಡಿಯುವ ಮಹಿಳೆ ತನ್ನ ಬೇಡಿಕೆಗಳನ್ನು ಒತ್ತಾಯಿಸುತ್ತಿದ್ದಾಳೆ ಎಂದು ಹೇಳಿ, ಸಿ. ಐ. ಟಿ. ಯು. ಈ ಬೇಡಿಕೆಗಳನ್ನು ಪೂರ್ಣವಾಗಿ ಬೆಂಬಲಿಸುತ್ತಿದೆ ಎಂದರು. ಮುನಿಸಿಪಲ್ ಉದ್ಯೋಗಿಯಾದ ಶ್ರೀಮತಿ ಕಸ್ತೂರಿ ಅವರು ದುಡಿಯುವ ಮಹಿಳೆಯ ಬೇಡಿಕೆ ಪಟ್ಟಿಯನ್ನು ವಿವರಿಸಿದರು.

ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರದಲ್ಲಿ 30-5-79 ರಂದು ಬೃಹತ್ ಮೆರವಣಿಗೆ ನಡೆದು, ನಂಜಮ್ಮ, ಪಾಪಮ್ಮ, ಸೀತಮ್ಮ, ನರಸಮ್ಮ ಮತ್ತು ಜೈನಬೀಯಮ್ಮ ಅವರ ನೇತೃತ್ವದಲ್ಲಿ ದುಡಿಯುವ ಮಹಿಳೆಯರ ದಿನಾಚರಣೆ ನಡೆಯಿತು. ಪುರಸಭಾ ಸದಸ್ಯ ಕಾಂ. ಎಸ್. ಲಕ್ಷ್ಮಯ್ಯನವರ ನಾಯಕತ್ವದಲ್ಲಿ ರೆವೆನ್ಯೂ ಅಧಿಕಾರಿ ಮತ್ತು ಲೇಬರ್ ಇನ್ಸ್‌ಪೆಕ್ಟರ್ ಅವರಿಗೆ ಬೇಡಿಕೆಗಳ ಮನವಿ ಅರ್ಪಿಸಲಾಯಿತು. ನಂತರದ ಸಭೆಯಲ್ಲಿ ಮಹಿಳಾ ನಾಯಕಿಯರು, ಕಾಂ. ಲಕ್ಷ್ಮಯ್ಯನವರು ಹಾಗೂ ಕಾಂ. ಕಾಂತರಾಜ್ ಮಾತನಾಡಿದರು.

ಮೈಸೂರು

ಮೈಸೂರು ನಗರದಲ್ಲಿ ಸಿ. ಐ. ಟಿ. ಯು. ಗೆ ಸೇರಿದ ಸಂಘಗಳಾದ ರೇಷ್ಮೆ ಕೆಲಸಗಾರರ ಸಂಘ, ಬೀಡಿ ಕೆಲಸಗಾರರ ಸಂಘ, ಕಾರ್ಪೊರೇಷನ್ ಕೆಲಸಗಾರರ ಸಂಘ, ಜನರಲ್ ವರ್ಕರ್ಸ್ ಯೂನಿಯನ್ ಇವುಗಳ ದುಡಿಯುವ ಮಹಿಳೆಯರು ಬೇಡಿಕೆ ದಿನಾಚರಣೆ ನಡೆಸಿದರು.

ನಗರದ ಮುಖ್ಯ ಬೀದಿಗಳಲ್ಲಿ ಮಹಿಳೆಯರು ಕೆಂಬಾವುಟ ಹಿಡಿದು ಮೆರವಣಿಗೆ ನಡೆಸಿದ ನಂತರ ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಮನವಿ ಸಲ್ಲಿಸಿದರು. ಸಿ. ಐ. ಟಿ. ಯು. ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾಂ. ಎಂ. ಎನ್. ಉಗ್ರಪ್ಪ, ಶ್ರೀಮತಿ ದುರ್ಗಮ್ಮ, ಕಮಲಮ್ಮ ಮೊದಲಾದವರು ಮುಖಂಡತ್ವ ವಹಿಸಿದ್ದರು.

ಮಂಗಳೂರು

ಮಂಗಳೂರಿನಲ್ಲಿ 30-5-79 ರಂದು ಸಂಜೆ ಐದಕ್ಕೆ ಮೆರವಣಿಗೆ ನಡೆದು ಸಹಸ್ರ ಸಹಿಗಳಿರುವ ಬೇಡಿಕೆ ಮನವಿಯನ್ನು ಶ್ರೀಮತಿ ಕಾವೇರಿಯಮ್ಮ ಮತ್ತು ಶ್ರೀಮತಿ ಜಾನಮ್ಮ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು. ನಂತರ ಸಿ. ಐ. ಟಿ. ಯು. ಕಚೇರಿಯಲ್ಲಿ ಸಭೆ ನಡೆಯಿತು. ಶ್ರೀಮತಿ ಜಾನಮ್ಮ ಅವರು ಬೇಡಿಕೆಗಳನ್ನು ವಿವರಿಸಿ ಮಾತನಾಡಿದರು. ಅಧ್ಯಕ್ಷ ಭಾಷಣದಲ್ಲಿ ಶ್ರೀಮತಿ ಕಾವೇರಿಯಮ್ಮ ಅವರು ಬೇಡಿಕೆ ದಿನದ ಮಹತ್ವ ವಿವರಿಸಿ ಮಹಿಳೆಯರು ಸಂಘಟಿತರಾಗಬೇಕೆಂದು ಕರೆಕೊಟ್ಟರು.

ಸುಳ್ಯ

ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಂಘದ ಕರೆಯ ಪ್ರಕಾರ ಸುಳ್ಯದ ದುಡಿಯುವ ಮಹಿಳೆಯರು 30-5-79 ರಂದು ಮೆರವಣಿಗೆ ನಡೆಸಿ, ತಹಶೀಲ್ದಾರರಿಗೆ ತಮ್ಮ ಬೇಡಿಕೆ ಮನವಿಯನ್ನು ಅರ್ಪಿಸಿದರು. ಮನವಿಯನ್ನು ಸಂಬಂಧಿಸಿದ ಸಚಿವರಿಗೆ ಕಳುಹಿಸುವಂತೆಯೂ ಒತ್ತಾಯಿಸಲಾಯಿತು.

ಉಡುಪಿ, ಚಿಕ್ಕಮಗಳೂರು, ಸಕಲೇಶಪುರ, ಅರೆಹಳ್ಳಿ ಮತ್ತಿತರ ಹಲವೆಡೆಗಳಲ್ಲೂ ಸಹಿಸಂಗ್ರಹ, ಸಭೆ, ಮೆರವಣಿಗೆ ಕಾರ್ಯಕ್ರಮಗಳು ಜರುಗಿದ ವರದಿಯಾಗಿದೆ. ●

ಬೀಡಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಜೂನ್ 18 ರಂದು ತ್ರಿಪಕ್ಷೀಯ ಸಭೆ

ಬೀಡಿಕಾರ್ಮಿಕರ ಬೇಡಿಕೆಗಳನ್ನು ಚರ್ಚಿಸುವುದು ಮತ್ತು ಹಿಂದಿನ ತೀರ್ಮಾನ ಮತ್ತು ಆಶ್ವಾಸನೆಗಳನ್ನು ಜಾರಿಗೊಳಿಸುವುದರ ಬಗ್ಗೆ ಕ್ರಮತೆಗೆದುಕೊಳ್ಳುವುದರ ಕುರಿತು ಮಾತುಕತೆ ನಡೆಸಲು ರಾಜ್ಯದ ಅಡಿಷನಲ್ ಲೇಬರ್ ಕಮೀಷನರ್ ರವರು ಜೂನ್ 18 ರಂದು ಸಂಜೆ 3 ಗಂಟೆಗೆ ತ್ರಿಪಕ್ಷೀಯ ಸಭೆಯನ್ನು ಕರೆದಿರುವರು. ಬೀಡಿಕಾರ್ಮಿಕರ ಪ್ರತಿನಿಧಿಗಳು, ಮಾಲೀಕರ ಪ್ರತಿನಿಧಿಗಳುಮತ್ತು ಸರಕಾರ ಭಾಗವಹಿಸುವ ಈ ಸಭೆಯು ರಾಜ್ಯದ ಕಾರ್ಮಿಕ ಮಂತ್ರಿಯವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ "ಕಮಿಟಿ ರೂಮು"ನಲ್ಲಿ ಸೇರಲಿರುವುದು. 21-5-79 ರಂದು ರಾಜ್ಯ ಬೀಡಿಕಾರ್ಮಿಕರ ಫೆಡರೇಷನ್ ಕರೆ ಮೇರೆಗೆ ರಾಜ್ಯದಾದ್ಯಂತ ಬೀಡಿಕಾರ್ಮಿಕರು ಪ್ರತಿಭಟನಾ ಕಾರ್ಯಕ್ರಮ ಹಾಕಿದ್ದರ ಪರಿಣಾಮ ಈ ಸಭೆಯನ್ನು ಕರೆಯಲಾಗಿದೆ. ನಿಗದಿಯಾದ ಕನಿಷ್ಟ ವೇತನ ಜಾರಿ, ಎಲೆ ಏವರೇಜ್ ಮತ್ತು ಕಂಟ್ರಾಕ್ಟ್ ಪದ್ಧತಿ ರದ್ಧತಿ ಬಗ್ಗೆ ಚರ್ಚೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದೆಂದು ತಿಳಿದು ಬಂದಿದೆ. ●

ಕೊಕ್ಕೊ ಪ್ಲಾಂಟೇಷನ್ ಕಾರ್ಮಿಕರಿಗೆ ಅನ್ಯಾಯ

ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಿಳಿನೆಲೆ ಮತ್ತು ಕೊಂಬಾರು ಗ್ರಾಮಗಳಲ್ಲಿನ ಸರಕಾರಿ ಕೊಕ್ಕೊ ಪ್ಲಾಂಟೇಷನ್‌ನಲ್ಲಿ ಕೆಲಸ ಮಾಡುತ್ತಿರುವ ಸುಮಾರು 48 ಜನ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿರುವುದರ ವಿರುದ್ಧ ಪ್ರತಿಭಟಿಸಿ ಕೊಕ್ಕೊ ಕಾರ್ಮಿಕರ ಪ್ರತಿನಿಧಿಗಳು, ಹಿಂದಿನ ಸಂಬಳ ಸಹಿತ ಕೆಲಸ ಕೊಡಬೇಕೆಂದು ಒತ್ತಾಯಿಸಿ ಪುತ್ತೂರು ಕೊಕ್ಕೊ ವಿಭಾಗದ Divisional forest officer ರವರಿಗೆ ಮನವಿ ಅರ್ಪಿಸಿದರು.

○

ಸಲಹಾ ಸಮಿತಿ ರಚನೆ ಖಂಡನಾರ್ಹ

ಕೊಡಗು ಜಿಲ್ಲಾ, ವಿರಾಜಪೇಟೆಯ ಪುರಸಭೆಗೆ ಮೇ 27 ರಂದು ಚುನಾವಣೆ ನಡೆಯಬೇಕಾಗಿತ್ತು. ಈ ಸಂದರ್ಭದಲ್ಲಿ ಇಂದಿರಾ ಕಾಂಗ್ರೆಸ್‌ನಲ್ಲಿರುವ ಗುಂಪುಗಾರಿಕೆ ಬಹಿರಂಗವಾಯಿತು. ಕೆಲವು ಅತೃಪ್ತ ಕಾಂಗ್ರೆಸ್ಸಿಗರು ಸ್ವತಂತ್ರರಾಗಿ ಸ್ಪರ್ಧಿಸಿದ್ದರು. ಇಂದಿರಾಕಾಂಗ್ರೆಸ್ಸಿನೊಳಗಿನ ಯಾದವೀ ಕಲಹದಿಂದ ಅದು ಪೂರ್ಣ ಪರಾಭವ ಹೊಂದುವುದು ನಿಶ್ಚಿತವಾಗಿತ್ತು.

ಈ ಪರಿಸ್ಥಿತಿಯಲ್ಲಿ ಚುನಾವಣೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ಬಂದದ್ದು ಇಂದಿರಾ ಕಾಂಗ್ರೆಸ್ಸಿಗರಿಗೆ ವರದಾನದಂತಾಗಿದೆ. ಈ ತಡೆಯಾಜ್ಞೆಯನ್ನು ಶೀಘ್ರದಲ್ಲೇ ರದ್ದುಪಡಿಸಿ ಚುನಾವಣೆ ನಡೆಯುವಂತೆ ಮಾಡುವುದು ಸರಕಾರದ ಕರ್ತವ್ಯವಾಗಿದೆ. ಆದರೆ ಈ ಬಗ್ಗೆ ಆಸಕ್ತಿವಹಿಸುವುದಕ್ಕೆ ಬದಲಾಗಿ ಸರಕಾರ ತಡೆಯಾಜ್ಞೆಯನ್ನು ನೆಪವಾಗಿ ಮಾಡಿ ಸಲಹಾ ಸಮಿತಿಯೊಂದನ್ನು ವಿರಾಜಪೇಟೆಯ ಪುರಜನರ ಮೇಲೆ ಹೇರಿದೆ.

ತಡೆಯಾಜ್ಞೆಯನ್ನು ಶೀಘ್ರದಲ್ಲೇ ರದ್ದುಗೊಳಿಸಲು ಕ್ರಮ ಕೈಗೊಂಡು ಪ್ರಜಾಪ್ರಭುತ್ವ ಕ್ರಮದಲ್ಲಿ ಚುನಾವಣೆ ನಡೆಸಿ ಜನತೆಯ ಚುನಾಯಿತ ಪ್ರತಿನಿಧಿಗಳ ಕೈಯಲ್ಲಿ ಅಧಿಕಾರ ವಹಿಸುವುದಕ್ಕೆ ಬದಲಾಗಿ ಇಂದಿರಾ ಕಾಂಗ್ರೆಸ್ಸಿಗರನ್ನು ಜನತೆಯ ಮೇಲೆ ಹೇರಲು ಸರಕಾರ ಕೈಗೊಂಡಿರುವ ಈ ಪ್ರಜಾಪ್ರಭುತ್ವ ವಿರೋಧಿ ಕ್ರಮವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವಿರಾಜಪೇಟೆ ಶಾಖೆ ತೀವ್ರವಾಗಿ ಖಂಡಿಸುತ್ತದೆ. ●

ಪ್ರತಿಗಾಮಿ ಪಿತೂರಿಗಳನ್ನು ಸೋಲಿಸಲು ಎಡರಂಗವು ಜನತೆಯನ್ನು ಒಟ್ಟು ಸೇರಿಸುತ್ತಿದೆ.

ಪಶ್ಚಿಮ ಬಂಗಾಳದ ಎಡರಂಗ ಸರಕಾರವು ಸಹಾಗವಾಗಿ ಕೆಲಸ ಮಾಡುವ ಮತ್ತು ತನ್ನ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ದಾರಿಯಲ್ಲಿ ಆತಂಕವನ್ನೊಡ್ಡಲು ಪಶ್ಚಿಮ ಬಂಗಾಳದಲ್ಲಿ ಪ್ರತಿಗಾಮಿ ಶಕ್ತಿಗಳೂ, ಸ್ಥಾಪಿತ ಹಿತಾಸಕ್ತಿಗಳೂ ತೀವ್ರ ಪ್ರಯತ್ನಗಳನ್ನು ಮಾಡುತ್ತಿವೆ. ಮೇ 6ರಂದು ಕಲ್ಕತ್ತಾದಲ್ಲಿ ಎಡರಂಗ ಸರಕಾರದ ವಿರುದ್ಧ ನಡೆದ ಸಮಾವೇಶದಲ್ಲಿ ಈ ಪ್ರಯತ್ನಗಳು ಒಂದು ಹೊಸ ಘಟ್ಟಕ್ಕೆ ತಲುಪಿವೆ. ಸಮಾವೇಶದಲ್ಲಿ ಪಾಲುಗೊಂಡವರ ಪಟ್ಟಿಯಿಂದ ಸಮಾವೇಶದ ಗುಣವು ಸ್ಪಷ್ಟವಾಗುತ್ತದೆ. ಕಾಂಗ್ರೆಸ್, ಕಾಂಗ್ರೆಸ್(ಐ), ಮುಸ್ಲಿಂ ಲೀಗು ಮತ್ತು ಜನತಾಪಕ್ಷದ ಪಿ. ಸಿ. ಸೇನರ ಗುಂಪಿಗೆ ಸೇರಿದ ಕೆಲವು ಜನತಾ ಮುಂದಾಳುಗಳು ಅಲ್ಲಿ ಸೇರಿದ್ದರು. ಈಗ ಪಶ್ಚಿಮ ಬಂಗಾಳದಲ್ಲಿ ಪಿ. ಸಿ. ಸೇನರು ಅತೃಪ್ತ ರಾಜಕಾರಣಿಯಾಗಿದ್ದಾರೆ.

ಪಿ. ಸಿ. ಸೇನರು 1977 ರಲ್ಲಿ ಜನತಾ ಅಭ್ಯರ್ಥಿಯಾಗಿ ಆರಮಘರ ಲೋಕಸಭಾ ಕ್ಷೇತ್ರದಿಂದ ಆರಿಸಿ ಬಂದುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಆ ಕ್ಷೇತ್ರವನ್ನು ಅವರಿಗೆ ಬಿಟ್ಟುಕೊಟ್ಟ ಕಾರಣ ಎಂಬುದನ್ನು ಇಲ್ಲಿ ನೆನಪು ಮಾಡಬಹುದು. ಅವರೇ ಇದನ್ನು ಆ ಕಾಲದಲ್ಲಿ ಒಪ್ಪಿದ್ದರು. ಈಗಲೂ ಆಗಲೂ, ಸಿ. ಪಿ. ಐ. (ಎಂ) ಮತ್ತು ಇತರ ಎಡರಂಗ ಪಕ್ಷಗಳಿಗೆ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡುವುದು ಪ್ರಾಥಮಿಕ ಕರ್ತವ್ಯವಾಗಿದೆ. ಆದರೆ ಎಲ್ಲಾ ಕಾಲದಲ್ಲೂ ಕಮ್ಯುನಿಸ್ಟ್ ವಿರೋಧಿಯಾದ ಶ್ರೀ ಸೇನರಿಗೆ ಬೇರೆ ಅಭಿಪ್ರಾಯಗಳಿವೆ.

ಎಡರಂಗದ ಸರಕಾರ ರಚನೆಯಾಗಿ 6 ತಿಂಗಳಾಗುವುದರ ಮೊದಲೇ ಪ್ರತಿಗಾಮಿ ಶಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳು ಪಿತೂರಿ ನಡೆಸಲು ಉಪಕ್ರಮಿಸಿದವು. ಅವು ಜೊತೆಯಾಗಿ ವರ್ತಿಸಲು ಎಲ್ಲಾ ಪ್ರಯತ್ನಗಳನ್ನು ನಡೆಸಿದವು. ಬೆಳೆ ಪಾಲುದಾರರ ಹಿತಗಳನ್ನು ರಕ್ಷಿಸುವುದಕ್ಕಾಗಿಯೂ, ಅತಿ ಬಡರೈತರ ಅನುಕೂಲಕ್ಕಾಗಿಯೂ ಭೂಸುಧಾರಣಾ (ತಿದ್ದುಪಡಿ) ಮಸೂದೆ, 1977ನ್ನು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದಾಗ ಸೆಪ್ಟಂಬರ್ 29, 1977ರಂದು ಕಾಂಗ್ರೆಸ್, ಕಾಂಗ್ರೆಸ್ (ಐ) ಮತ್ತು ಜನತಾ ಸದಸ್ಯರು ವಿಧಾನ ಸಭೆಯಿಂದ ಹೊರ ನಡೆದುದು ಅಂತಹ ಸಂಯುಕ್ತ ಕಾರ್ಯಾಚರಣೆಯ ಆರಂಭವಾಗಿತ್ತು.

ಅಂದಿನಿಂದ ಈ 'ಐಕ್ಯತೆ'ಯನ್ನು ಶಕ್ತಿಯುತಗೊಳಿಸುವ 'ಮಹತ್ತರವಾದ' ಕರ್ತವ್ಯವನ್ನು ಶ್ರೀ ಪಿ. ಸಿ. ಸೇನರು ತಮ್ಮ ಮೇಲೆ ತೆಗೆದುಕೊಂಡಿದ್ದಾರೆ.

ಸ್ಥಾಪಿತ ಹಿತಾಸಕ್ತಿಗಳ ಭಯ:

ಈಗಿನ ಸಂವಿಧಾನದ ಚೌಕಟ್ಟಿನೊಳಗೆ ತೀವ್ರ ಪ್ರಗತಿಪರ ಬದಲಾವಣೆಯನ್ನು ತರಲು ಎಡರಂಗ ಸರಕಾರಕ್ಕೆ ಸಾಧ್ಯವಿಲ್ಲ, 'ಸಾಧ್ಯವಿದೆ' ಎಂದೂ ಅದು ಹೇಳುವುದಿಲ್ಲ. 'ಕೆಲಸಕ್ಕಾಗಿ ಆಹಾರ', 'ನಿರುದ್ಯೋಗ ಪರಿಹಾರ', 'ಆಪರೇಷನ್ ಬರ್ಗಾ', ಇತ್ಯಾದಿ ಕಾರ್ಯಕ್ರಮಗಳ ಮೂಲಕ ಮಿಲಿಯಾಂತರ ಶ್ರಮಿಕರ ಕಷ್ಟಕಾರ್ಪಣ್ಯಗಳನ್ನು ನೀಗಲು ಸಾಧಾರಣ ಕಾರ್ಯಾಚರಣೆಗಿಳಿದ ಪರಿಣಾಮ; ಈ ಕಾರ್ಯಕ್ರಮಗಳು ಜನಸಾಮಾನ್ಯರ ಸಹಾಯದಿಂದ ಹೊಸ ಹೊಸ ಜಯಗಳನ್ನು ಪಡೆಯುತ್ತಿವೆ. ಮತ್ತು ಗ್ರಾಮಾಂತರ ಪ್ರದೇಶಗಳ ಮತ್ತು ಪೇಟೆಪಟ್ಟಣಗಳ ಸ್ಥಾಪಿತ ಹಿತಾಸಕ್ತಿಗಳು ತಮ್ಮ ಹಿತಗಳ ಬಗ್ಗೆ ಭಯಗೊಂಡಿವೆ. ಸ್ವಾಭಾವಿಕವಾಗಿ, ಆ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳೂ, ವ್ಯಕ್ತಿಗಳೂ ಪ್ರಯತ್ನಪಟ್ಟು ಜೊತೆಸೇರಿ ಎಡರಂಗ ಸರಕಾರವನ್ನು ತಮ್ಮ ಎಲ್ಲ ಶಕ್ತಿಗಳಿಂದ ವಿರೋಧಿಸಲು ಮುಂದಾಗುತ್ತಿವೆ.

ಪಂಚಾಯಿತಿ ಚುನಾವಣೆಗಳಲ್ಲಿ ಅಂತಹ ಒಂದು ಒಕ್ಕೂಟವನ್ನು ಕಟ್ಟಿಕೊಳ್ಳಲು ಶ್ರೀ ಪಿ. ಸಿ. ಸೇನರು ಪ್ರಯತ್ನಪಟ್ಟರು. ಮೇ 6ರ ಸಮಾವೇಶದಲ್ಲಿ ಪಶ್ಚಿಮ ಬಂಗಾಳ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪೂರಬಿ ಮುಖರ್ಜಿಯವರು ಮಾತನಾಡುತ್ತಾ "ಸಿ. ಪಿ. ಐ. (ಎಂ)ನ ವಿರುದ್ಧ ಶ್ರೀ ಪಿ.ಸಿ. ಸೇನರು ಪಂಚಾಯಿತಿ ಚುನಾವಣೆಗಳಲ್ಲಿ ಎಲ್ಲಾ ರಾಷ್ಟ್ರೀಯ ಪಕ್ಷಗಳು ಪಕ್ಷೇತರ ಪ್ರಜಾಪ್ರಭುತ್ವ ತಳಹದಿಯಲ್ಲಿ ಸ್ಪರ್ಧಿಸಬೇಕೆಂದು ಸೂಚನೆಕೊಟ್ಟರು." ಎಂದು ನೆನಪು ಸ್ಪಷ್ಟಪಡಿಸಿದುದನ್ನು ಇಲ್ಲಿ ನೆನಪು ಮಾಡಬಹುದು. ಆ ರಾಜ್ಯದ ಜನತೆ ಈ ತಂತ್ರವನ್ನು ಹೇಗೆ ತಿರಸ್ಕರಿಸಿದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಪಿ. ಸಿ. ಸೇನರು ಪಾಠ ಕಲಿಯುವುದಕ್ಕೆ ಏನೇನೂ ತಯಾರಿಲ್ಲ. ಬೆಳೆಪಾಲುದಾರರ ಹೆಸರುಗಳನ್ನು ದಾಖಲೆ ಮಾಡಿ ಅವರ ಹಿತಗಳನ್ನು ರಕ್ಷಿಸುವ 'ಆಪರೇಷನ್ ಬರ್ಗಾ'ವಂತೂ ಅವರನ್ನು ಇನ್ನಷ್ಟು ಉದ್ರೇಕಗೊಳಿಸಿದೆ.

ಅರಾಜಕತೆಯನ್ನುಂಟುಮಾಡುವ ಯೋಜನೆ:

ಸಮಾವೇಶವಂತೂ ಹೊಸದೊಂದು ಪಿತೂರಿಯ ಭಾಗವಾಗಿದೆ. ಈ ಸಲ ಪಿ. ಸಿ. ಸೇನರು ನೇರವಾಗಿ ಕಾಂಗ್ರೆಸ್, ಕಾಂಗ್ರೆಸ್ (ಐ) ಮತ್ತು ಮುಸ್ಲಿಂಲೀಗ್‌ಗಳು ಜತೆ ಸೇರಬೇಕೆಂದು ಕರೆಕೊಟ್ಟರು. ಈಗಲೂ ಕಾಂಗ್ರೆಸ್ (ಐ) ಅತ್ಯಂತ ದುಷ್ಟ ಸರ್ವಾಧಿಕಾರಿ ಶಕ್ತಿಗಳನ್ನು ಪ್ರತಿನಿಧೀಕರಿಸುತ್ತಿರುವುದು ಅವರಿಗೆ ಏನೂ 'ಆತಂಕ'ವನ್ನುಂಟುಮಾಡಿಲ್ಲ.

ಆ ಸಮಾವೇಶದಲ್ಲಿ ಭಾಷಣ ಮಾಡಿದ 30 ಭಾಷಣಕಾರರೂ ಎಡರಂಗ ಸರ್ಕಾರದ ಮೇಲೆ ಅದರಲ್ಲೂ ಸಿ. ಪಿ. ಐ. (ಎಂ)ನ ಮೇಲೆ ತಮಗಿದ್ದ ದ್ವೇಷವನ್ನು ವ್ಯಕ್ತಪಡಿಸಿದರು. ಪಿ. ಸಿ. ಸೇನರು ಮಾಮೂಲಾಗಿ ರಾಜ್ಯದಲ್ಲಿ "ಹಿಂಸೆ ಮತ್ತು ಕಾನೂನು ರಹಿತಸ್ಥಿತಿ" ಇದೆ ಎಂದು ಆಪಾದಿಸಿದರು. ಎಡರಂಗ ಸರಕಾರದ ವಿರುದ್ಧ ಒಂದು ಚಳುವಳಿಗೆ ಕಾರ್ಯಕ್ರಮ ಹಾಕಬೇಕೆಂದು ಪಿ. ಸಿ. ಸೇನರಿಗೆ 'ಅತ್ಯುತ್ತಮ ಕರ್ತವ್ಯ' ಹೊರಿಸಿತು.

ಆದರೆ ಈ ಎಲ್ಲಾ ವಿರೋಧಿ ರಾಜಕೀಯ ಪಕ್ಷಗಳು ಮತ್ತು ಪಿ. ಸಿ. ಸೇನರು ಸಿ. ಪಿ. ಐ. (ಎಂ) ವಿರುದ್ಧ ಅಂತಹದೊಂದು ಒಕ್ಕೂಟವನ್ನು ಕಟ್ಟುವುದು ಸುಲಭವಲ್ಲ. ಪ್ರತಿಯೊಂದು ವಿರೋಧಿ ರಾಜಕೀಯ ಪಕ್ಷವೂ ಆಂತರಿಕ ಬಿಕಟ್ಟಿನಿಂದ ತುಂಬಿದೆ; ಮತ್ತು ಎಡರಂಗ ಸರಕಾರದ ವಿರುದ್ಧ ಚಳುವಳಿಯ 'ಕಾರ್ಯಯೋಜನೆ'ಯನ್ನು ಹಾಕಬೇಕೆಂಬುದರ ಕುರಿತು ಭಿನ್ನಾಭಿಪ್ರಾಯವನ್ನು ತಳೆದಿದೆ. ಪಿ. ಸಿ. ಸೇನರಿಗೆ ತಮ್ಮದೇ ಜನತಾ ಪಕ್ಷದಿಂದ ಸಂಪೂರ್ಣ ಬೆಂಬಲ ದೊರೆಯಲಿಲ್ಲ. ರಾಜ್ಯದ ಜನತಾ ಪಕ್ಷದ ಮುಂದಾಳು ಬಿಮನ್ ಮಿತ್ರರು ಹೇಳಿ ತೋರಿಸಿದಂತೆ ಈ ಸಮಾವೇಶದಲ್ಲಿ 17 ಜನತಾ ಎಂ. ಪಿ. ಗಳ ಪೈಕಿ ಕೇವಲ 4 ಮಂದಿ ಮಾತ್ರ, 29 ಎಂ. ಎಲ್.ಎ. ಗಳ ಪೈಕಿ ಕೇವಲ 5 ಮಂದಿ ಮಾತ್ರ ಭಾಗವಹಿಸಿದ್ದರು.

ಕಾಂಗ್ರೆಸ್ (ಐ) ಜತೆ ಸಮ್ಮಿಳನ:

ರಾಜ್ಯದಲ್ಲಿ ಅರಾಜಕತೆಯನ್ನುಂಟುಮಾಡಿ ಎಡರಂಗದ ಸರಕಾರವನ್ನು ಹೊರ ಹಾಕುವುದೇ ಶ್ರೀ ಸೇನರ ಉದ್ದೇಶವೆಂದು ಬಿಮನ್‌ಮಿತ್ರರು ಟೀಕಿಸಿದ್ದಾರೆ. ಸಿ. ಪಿ. ಐ. (ಎಂ) ರಂಗದ ವಿರುದ್ಧ 'ಸೇನ್ ಕಾಂಗ್ರೆಸ್ ಮೋರ್ಚಾ'ವೆಂದು ಕರೆಯುತ್ತಾ ಬಿಮನ್‌ಮಿತ್ರರು ಕೇಂದ್ರದಲ್ಲಿ ಜನತಾ ಪಕ್ಷವು ತುರ್ತುಪರಿಸ್ಥಿತಿಯ ಅನಾಹುತಗಳಿಗಾಗಿ ಶ್ರೀಮತಿ ಇಂದಿರಾಗಾಂಧಿಯವರನ್ನು ಶಿಕ್ಷಿಸುವುದಕ್ಕೆ ತಯಾರಿ ನಡೆಸುತ್ತಿರುವಾಗ, ಪಿ. ಸಿ. ಸೇನರು ಅವಳ ಪಕ್ಷವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಸಿ. ಪಿ. ಐ. (ಎಂ) ರಂಗದ ವಿರುದ್ಧ ಸೂಚಿಸಲ್ಪಟ್ಟ ಈ ಒಕ್ಕೂಟವು ಅಪವಿತ್ರವೆಂದು ಜನತಾ ಯುವ ಮೋರ್ಚಾ ಕರೆದಿದೆ.

ರಾಜ್ಯದ ಜನತಾ ಪಕ್ಷದಲ್ಲಿ ಎಡರಂಗ ಸರಕಾರಕ್ಕೆ ವಿರುದ್ಧವಾಗಿದ್ದರೂ ಎರಡೂ ಕಾಂಗ್ರೆಸ್‌ಗಳ ಜತೆ ಸೇರ್ಪಡೆಯಾಗುವ ಸೇನರ ಸೂಚನೆಯನ್ನು ಎಲ್ಲರೂ ಒಪ್ಪಿಕೊಳ್ಳಲು ಅಸಾಧ್ಯವಾಗುತ್ತಿದೆ. ರಾಜ್ಯ ಜನತಾಪಕ್ಷದ ಒಬ್ಬ ಉಪಾಧ್ಯಕ್ಷರು "ನಾವಾಗಿಯೇ ರಾಜ್ಯಾದ್ಯಂತ ಒಂದು ಚಳುವಳಿ ನಡೆಸುತ್ತೇವೆಯೇ ಹೊರತು ಯಾವ ಸಂದರ್ಭದಲ್ಲೂ ಕಾಂಗ್ರೆಸ್ಸಿನ ಜತೆ ಸೇರುವುದಿಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ.

ಅಲ್ಲದೆ, ಪ್ರಮೋದ್‌ದಾಸ್ ಗುಪ್ತಾರು ಹೇಳಿದಂತೆ ರಾಜ್ಯದ ಜನತೆ ಅಂತಹ ಒಕ್ಕೂಟಕ್ಕೆ ಬೆಂಬಲ ನೀಡುವುದಿಲ್ಲ ಮಾತ್ರವಲ್ಲ ಅಂತಹ ಜನತಾ ಬೆಂಬಲವಿಲ್ಲದ ವಿನಹ ಕೆಲವೊಂದು ಗುತ್ತೇದಾರಿ ನಿಯಂತ್ರಿತ ಪತ್ರಿಕೆಗಳು ಎಷ್ಟು ಪ್ರಚಾರಗೈದರೂ ಅಂತಹ ಪ್ರಯತ್ನವು ಯಶಸ್ವಿಯಾಗಲು ಸಾಧ್ಯವಿಲ್ಲ. ಜನಸಮೂಹಗಳನ್ನು ಒಟ್ಟುಗೂಡಿಸುವ ಮೂಲಕ ಪ್ರತಿಗಾಮಿಶಕ್ತಿಗಳನ್ನು ಮತ್ತು ಸ್ಥಾಪಿತ ಹಿತಾಸಕ್ತಿಗಳ ಹೊಸ ಹೊಸ ಪಿತೂರಿಗಳನ್ನು ಸೋಲಿಸಲಾಗುತ್ತೆ ಎಂದು ಪ್ರಮೋದ್‌ದಾಸ್‌ಗುಪ್ತರು ಸ್ಪಷ್ಟಪಡಿಸಿದ್ದಾರೆ.

ಹಿಂಸೆ ಯಾರದ್ದು ?

ಸಿ. ಪಿ. ಐ. (ಎಂ)ನ ಹಿಂಸಾತ್ಮಕ ರಾಜಕೀಯವನ್ನು ವಿರೋಧಿಸುವ 'ಪವಿತ್ರ' ಉದ್ದೇಶದಿಂದ ಸಮಾವೇಶಕ್ಕೆ ತಯಾರಿ ಮಾಡುವ ಭಾಗವಾಗಿ ಶ್ರೀ ಪಿ. ಸಿ. ಸೇನರು ಅವರ ಅನುಯಾಯಿಗಳು ಬಾರಾಸಾತ್ ಪೋಲೀಸ್ ಸ್ಟೇಷನ್ನಿನ ಕ್ಷೇತ್ರದಲ್ಲಿರುವ ದಾದ್‌ಪುರ ಪ್ರದೇಶದ ರೈತರ ಮೇಲೆ ಸಾಮೂಹಿಕ ಆಕ್ರಮಣಗೈದರು.

ಈ ಪ್ರದೇಶದಲ್ಲಿ 'ಆಪರೇಷನ್ ಬರ್ಗಾ'ವನ್ನು ಆರಂಭ ಮಾಡಿದಾಕ್ಷಣ, ಎರಡು ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಜನತಾ ಪಕ್ಷಗಳಿಗೆ ನಿಷ್ಠೆಯುಳ್ಳ ದೊಡ್ಡ ಭೂಮಾಲೀಕರು ತಮ್ಮ ಪರಂಪರಾಗತ ಹಿತಗಳಿಗೆ ಧಕ್ಕೆ ಬರುತ್ತದೆ ಎಂಬ ಆಧಾರದಲ್ಲಿ ಈ ಕಾರ್ಯಕ್ಕೆ ಅಡ್ಡಿಯನ್ನೊಡ್ಡಲು ಆರಂಭಿಸಿದರು. ದಾದ್‌ಪುರ ಗ್ರಾಮಪಂಚಾಯಿತಿ ಆಫೀಸಿನಲ್ಲಿ 'ದಾಖಲೆ ಮಾಡುತ್ತಿರುವ'ವರ ಕೆಲವು ನೌಕರರ ಮೇಲೆ ಅವರು ಧಾಳಿ ನಡೆಸಿದರು. ಹೆಸರುಗಳು ದಾಖಲೆಯಾದ ಬೆಳೆ ಪಾಲುದಾರರ ಮನೆಗಳ ಮೇಲೆ ಧಾಳಿ ನಡೆಸುವುದಕ್ಕೆ ಮತ್ತು ಅವರ ಬೆಳೆಗಳನ್ನು ನಾಶಮಾಡಲಿಕ್ಕೆ 'ಗೂಂಡಾ'ಗಳನ್ನು ಬಿಡಲಾಯಿತು. ಮಾರ್ಚಿ 26ರಂದು ಸಿ. ಪಿ. ಐ. (ಎಂ) ರೈತ ಕಾರ್ಯಕರ್ತರಾದ ಕಾಂ. ಅಜೀಜುರ್ ರಹಮಾನರವರನ್ನು ಪಾನ್‌ಶಿಲಾ ಗ್ರಾಮದಲ್ಲಿ ಜೋತೆದಾರರ ಗೂಂಡಾಗಳು ಕೊಲೆ ಮಾಡಿದರು.

ಅಂತಹ ಎಲ್ಲಾ ಹಿಂಸಾಕೃತ್ಯಗಳ ಹಿಂದೆ ಪ್ರಾದೇಶಿಕ ಕಾಂಗ್ರೆಸ್ ಮತ್ತು ಜನತಾ ಮುಂದಾಳುಗಳು ಇದ್ದಾರೆ ಎಂದು ತಿಳಿದು ಬಂದಿದೆ. ಇತರ ಪ್ರದೇಶಗಳಲ್ಲಿ ಮಾಡಿದಂತೆ ಇಲ್ಲಿಯೂ ಶ್ರೀ ಪಿ. ಸಿ. ಸೇನರೂ ಅವರ ಹಿಂಬಾಲಕರೂ ಇಲ್ಲಿನ ಜೋತೆದಾರರ ಜತೆ ಸೌಹಾರ್ದತೆಯನ್ನು ವ್ಯಕ್ತಪಡಿಸಿದ್ದಾರೆ. ಅವರೂ ಮತ್ತು ರಾಜ್ಯದ ಕೆಲವು ಜನತಾ ಎಂ. ಪಿ. ಗಳು ಜೋತೆದಾರರಿಗೆ ಬೆಂಬಲ ವ್ಯಕ್ತಪಡಿಸಿದರು.

ಸೇನರ ಚಟುವಟಿಕೆಗಳಿಂದ ಧೈರ್ಯತಾಳಿ; ಕಾಂಗ್ರೆಸ್ ಮತ್ತು ಜನತಾ ಬೆಂಬಲಿಗರು ದಾದ್‌ಪುರ ಪ್ರದೇಶದಲ್ಲಿ ಏಪ್ರಿಲ್ 30 ರಂದು ಶಂಕರಗಾಚಿ ಗ್ರಾಮದಲ್ಲಿ ಬಡರೈತರ ಮೇಲೂ ಬೆಳೆ ಪಾಲುದಾರರ ಮೇಲೂ ವಿಸ್ತೃತವಾದ ಧಾಳಿಗಳನ್ನು ನಡೆಸಿದರು. ಪ್ರಾದೇಶಿಕ ಗಾಮ ಪಂಚಾಯತ್ ಸದಸ್ಯರೂ ಸಿ. ಪಿ. ಐ. (ಎಂ) ಬ್ರಾಂಚ್ ಕಾರ್ಯದರ್ಶಿಯೂ ಆಗಿರುವ ಅಬ್ದುಲ್ ರಜಾಕ್‌ರ ಮತ್ತು ಇತರ ರೈತ ಕಾರ್ಯಕರ್ತರ ಮನೆಗಳ ಮೇಲೆ ಧಾಳಿ ನಡೆಸಿ ಅಲ್ಲಿದ್ದ ಸೊತ್ತುಗಳನ್ನು ಲೂಟಿಮಾಡಲಾಯಿತು. ಈ ಆಕ್ರಮಣದಲ್ಲಿ 'ಗನ್ನು'ಗಳನ್ನು ಉಪಯೋಗಿಸಲಾಗಿತ್ತು.

ಮರುದಿನ ಮೇ 1ರಂದು ಸಿ. ಪಿ. ಐ. (ಎಂ) ಬಾರಾಸಾತ್ (ದಕ್ಷಿಣ) ಪ್ರಾದೇಶಿಕ ಸಮಿತಿಯ ಸದಸ್ಯ ಕಾಂ. ಪರಿಮಳ ಸರ್ಕಾರ್ ಎಂಬುವವರನ್ನು ಅವರು 'ಮೇ ದಿನ'ದ ಮೆರವಣಿಗೆಗೆ ತಯಾರಿ ನಡೆಸುತ್ತಿರುವ ವೇಳೆಯಲ್ಲಿ ಅಪಹರಿಸಿದರು ಅನಂತರ ಅವರನ್ನು ಕೊಂದುಹಾಕಿ ಅವರ 'ದೇಹ'ವನ್ನು ಕಾಲುವೆಯ ಬದಿಯಲ್ಲಿ ಹೂತು ಹಾಕಿದರು. ಮಾರನೇ ದಿನ ಅವರನ್ನು ಹೊರತೆಗೆಯಲಾಯಿತು.

ಕೊಲೆಗಳ ವಿರುದ್ಧ ಪ್ರತಿಭಟನೆ:

ಕೊಲೆಯಿಂದ ಉದ್ರಿಕ್ತರಾದ ಪ್ರಾದೇಶಿಕ ಜನ, ವಿಶೇಷವಾಗಿ ರೈತರು ಸಹಸ್ರಾರು ಸಂಖ್ಯೆಯಲ್ಲಿ ಹೊರಬಂದು ಈ ಕೊಲೆಗೆ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ಬೇಡಿಕೆಯನ್ನಿಟ್ಟರು. ಕಾಂ. ಸರ್ಕಾರ್ ಇವರ ಶವವನ್ನು ಬೃಹತ್ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಬಾರಾಸಾತಿನಲ್ಲಿ ಮೇ ಮೂರರಂದು ಸಂಪೂರ್ಣವಾಗಿ ಬಂದ್ ಆಚರಿಸಲಾಯಿತು. ಈ ಅಮಾನುಷ ಕೊಲೆಯನ್ನು ಪ್ರತಿಭಟಿಸಿ ಎರಡು ದೊಡ್ಡ ಮೆರವಣಿಗೆಗಳನ್ನು ಕೊಂಡೊಯ್ಯಲಾಯಿತು. ಮೇ 4 ರಂದು ದೇಗಂಗ ಮತ್ತು ನ್ಯೂಬರಾತ್‌ಪುರಗಳಲ್ಲಿ ಬಂದ್ ಆಚರಿಸಿದರು.

ಡೆಮಾಕ್ರಟಿಕ್ ಯೂತ್ ಫೆಡರೇಷನ್ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್‌ಗಳ ಕಲ್ಕತ್ತಾ ಮತ್ತು 24-ಪರಗಣ ಜಿಲ್ಲಾ ಸಮಿತಿಗಳು ಮೇ 18 ರಂದು ಒಂದು ಬೃಹತ್ ಮೆರವಣಿಗೆ ತೆರೆದು ಕಾಂ. ಪರಿಮಳ ಸರ್ಕಾರ್ ಮತ್ತು ಅಜೀಜುರ್ ರಹಮಾನರ ಕೊಲೆಗಳನ್ನು ಪ್ರತಿಭಟಿಸಲಾಯಿತು.

ಎರಡು ಕಾಂಗ್ರೆಸ್, ಮುಸ್ಲಿಂಲೀಗು ಮತ್ತು ಜನತಾಪಕ್ಷಗಳಿಗೆ ಸೇರಿದ

[5ನೇ ಪುಟ ನೋಡಿ]

ಸಾಹಿತಿಗಳು ಶೋಷಣೆಯ ವಿವಿಧ ಮುಖಗಳನ್ನು ತೋರಿಸಲಿ

—ಗೋದಾವರಿ

ಸಮಾಜ ಸೇವಾಸಂಘ, ಸಾಹಿತ್ಯಸಂಘ, ಸ್ಕೌಟ್ಸ್, ಭ್ರಷ್ಟಾಚಾರ ವಿರೋಧೀಸಂಘ, ಜಾತಿ ವಿನಾಶಸಂಘ, ಆತ್ಮಹತ್ಯೆ ವಿರೋಧಿಸಂಘ ಹೀಗೆ ಅನೇಕ ಬಗೆಯ ಸಂಘ-ಸಂಸ್ಥೆಗಳಲ್ಲಿ ದುಡಿದು, ಇವಾವೂ ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರವಲ್ಲ ಎಂಬ ಅನುಭವ ಸತ್ಯವನ್ನು ಕಂಡುಕೊಂಡು, ಕೊನೆಗೆ ಮಾರ್ಕ್ಸಿಸ್ಟ್ ಪಕ್ಷವನ್ನು ಒಪ್ಪಿಕೊಂಡ ಗೋದಾವರಿ ಪರುಳೇಕರ್, "ನಾನೇಕೆ ಕಮ್ಯುನಿಸ್ಟಳಾದೆ" ಎಂಬ ಕೃತಿಯನ್ನು ರಚಿಸುತ್ತಿದ್ದಾರೆ. ಸುಮಾರು 9 ವರ್ಷಗಳ ಕಾಲ ಸೆರೆಮನೆಯಲ್ಲಿ ಕಳೆದ ಗೋದಾವರಿ ಅವರಿಗೆ ಕಳ್ಳರು. ವೇಶ್ಯೆಯರು ಕೊಲೆಗಾರರ ಪರಿಚಯವೂ ಇದೆ. ಅವರನ್ನು ಕುರಿತೂ ಒಂದು ಗ್ರಂಥ ಬರೆಯುತ್ತಿದ್ದಾರೆ.

ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಕ್ರಾಂತಿಯಾಗಬೇಕು ಎಂಬ ಮಾತು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿದೆ. ಕ್ರಾಂತಿಯ ಮಾತನ್ನಾಡುವುದು ಇಂದಿನ ಫ್ಯಾಷನ್ ಕೂಡಾ ಆಗಿದೆ. ಆದರೆ ನಿಜವಾದ ಕ್ರಾಂತಿ ನಡೆಯಬೇಕಾಗಿರುವುದೂ ಎಲ್ಲಿ, ಕ್ರಾಂತಿಯ ಬೀಜ ಬಿತ್ತಬೇಕಾಗಿರುವುದು ಯಾವ ಮನೋಭೂಮಿಕೆಯ ಮೇಲೆ ಎಂಬ ಕಲ್ಪನೆ ಅನೇಕರಿಗಿಲ್ಲ. ಈ ದೃಷ್ಟಿಯಿಂದ ನೋಡಿದಾಗ ನಮ್ಮ ಅನೇಕ ಕ್ರಾಂತಿಕಾರರು ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದ್ದಾರೇನೋ, ಅಥವಾ ನಿಂತಲ್ಲಿಯೇ ನಿಂತು ಮುನ್ನಡೆಯ ಮಾತನಾಡುತ್ತಿದ್ದಾರೇನೋ ಎನಿಸುತ್ತದೆ.

ಇಂಥೆಲ್ಲ ಗದ್ದಲಗಳ ಮಧ್ಯೆ, ಪೊಳ್ಳು ಘೋಷಣೆಗಳ ನಡುವೆ ಕ್ರಾಂತಿಯ ಗಟ್ಟಿ ಧ್ವನಿಯಾಗಿ, ಕ್ರಾಂತಿಯ ದಿಕ್ಕು-ದಿಗಂತಗಳನ್ನು ಗುರುತಿಸಿ, ಅದರ ಸ್ಪಷ್ಟ ರೂಪ-ರೇಖೆಗಳ ಕಲ್ಪನೆಯನ್ನು ಕಂಡುಕೊಂಡು ನಿಜವಾದ ಕ್ರಾಂತಿಕಾರರಾಗಿ ಉಳಿದಿರುವ ಕೆಲವೇ ಕೆಲವು ಜನರಲ್ಲಿ ಮಹಾರಾಷ್ಟ್ರದ ಗೋದಾವರಿ ಪರುಳೇಕರ್ ಒಬ್ಬರು.

ಗೋದಾವರಿ ಪರುಳೇಕರ್ ಅವರ ಪರಿಚಯ ಕನ್ನಡಿಗರಿಗೆ ಕಡಿಮೆ. 'ಮಾನವ ಎಚ್ಚೆತ್ತಾಗ' ಕೃತಿಯ ಕನ್ನಡ ಅನುವಾದದ ಮೂಲಕ ಅವರನ್ನು ಬಲ್ಲವರು ಕೆಲವರಾದರೆ, ಮಾರ್ಕ್ಸಿಸ್ಟ್ ಪಕ್ಷದ ಮುಂದಾಳು ಎಂದು ಅವರನ್ನು ಅರಿತಿರುವವರು ಕೆಲವರು, ಇದರಾಚೆಗೆ ಗೋದಾವರಿ ಪರುಳೇಕರ್ ಕನ್ನಡಿಗರಿಗೆ ಒಂದು ಹೆಸರಷ್ಟೆ.

ಠಾಣೆ ಜಿಲ್ಲೆಯ 'ವಾರಲೀ' ಆದಿವಾಸಿ ಜನರನ್ನು ಮನುಷ್ಯರನ್ನಾಗಿ ಮಾಡಲು ಸಂಘಟನೆ, ಸಾಕ್ಷರತೆ, ಜಾಗೃತಿ, ಕ್ರಾಂತಿ ಇವುಗಳಿಗಾಗಿ ತಮ್ಮ ಇಡೀ ಜೀವನವನ್ನೇ ಮೀಸಲಿಟ್ಟ ಗೋದಾವರಿ ಪರುಳೇಕರ್, ಬದುಕಿನ ಕ್ರೂರ ಸತ್ಯಗಳಿಗೆ ಮುಖಾಮುಖಿಯಾಗಿ ನಿಂತವರು. ಸೆರೆವಾಸ, ಭೂಗತ ಬದುಕು, ಈ ರಾಷ್ಟ್ರದ ಜಮೀನ್ದಾರರ, ರಾಜಕಾರಣಿಗಳ, ಪೋಲೀಸರ ಅಟ್ಟಹಾಸ-ದಬ್ಬಾಳಿಕೆಗಳ ರುಚಿ ಕಂಡವರು. ಇವೆಲ್ಲವನ್ನೂ ಮೆಟ್ಟಿನಿಂತು ಕ್ರಾಂತಿಯ ಕಹಳೆ ಮೊಳಗಿಸಿ ಕೊನೆಗೂ ಜಯದ ಗುರಿಮುಟ್ಟಿದವರು.

ಈಗ ಪರುಳೇಕರ್ ಆದಿವಾಸಿಗಳ ಹೃದಯದಲ್ಲಿ ಮಾತ್ರವಲ್ಲ, ಅನೇಕ ಮಾನವ ಪ್ರೇಮಿಗಳ ಹೃದಯದಲ್ಲಿ 'ಗೋದಾರಾಣಿ'.

ಪರುಳೇಕರ್ ಅವರ ಕೃತಿ 'ಮಾನವ ಎಚ್ಚೆತ್ತಾಗ' ಒಂಭತ್ತು ಭಾಷೆಗಳಿಗೆ ಅನುವಾದವಾಗಿದೆ. ಆದಿವಾಸಿಗಳೊಂದಿಗೆ ತಾವು ಬದುಕಿ ಕಂಡುಕೊಂಡ ಸತ್ಯಗಳು, ಪ್ರಪಂಚವನ್ನೇ ಕಾಣದಿದ್ದ ಮುಗ್ಧ-ಅಜ್ಞ ಆದಿವಾಸಿಗಳನ್ನು ಬಡಿದೇಳಿಸಲು ನಡೆಸಿದ ಹೋರಾಟ ಇವುಗಳ ಪೂರ್ಣ ಚಿತ್ರಕೊಡುವ ಈ ಗ್ರಂಥ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನೂ ಪಡೆದುಕೊಂಡಿದೆ.

ಮಾರ್ಚ್ ತಿಂಗಳ ಆದಿಭಾಗದಲ್ಲಿ ಬೆಂಗಳೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಸಮಾರೋಪ ಭಾಷಣ ಮಾಡಲು ಬಂದ ಗೋದಾವರಿ ಪರುಳೇಕರ್ ಅವರನ್ನು ಕಂಡಾಗ, ಒಂದು ಬಂಡಾಯ ಬದುಕಿನ ಇತಿಹಾಸ ಇವರ ಬೆನ್ನಿಗಿದೆ ಎಂಬುದನ್ನು ನಂಬುವುದು ಕಷ್ಟವಾಗಿತ್ತು. ಸೌಮ್ಯ ಮುಖ, ಸರಳ ಉಡುಗೆ, ವಯೋಧರ್ಮಕ್ಕನು ಗುಣವಾದ (ಎಪ್ಪತ್ತರ ಹೊಸ್ತಿಲನ್ನು ದಾಟಿದ್ದಾರೆ) ಸುಕ್ಕುಗಳು, ಸಾಧಾರಣ ಮಹಿಳೆಯರಂತೆಯೇ ಕಂಡರು. ಆದರೆ ಬಂಡಾಯದ ವೇದಿಕೆ ಏರಿದಾಗ ಪರುಳೇಕರ್ ಅವರಿಗೆ ತಾರುಣ್ಯ ಮರುಕಳಿಸಿತ್ತು. ಸ್ಪಷ್ಟ-ದಿಟ್ಟ ಮಾತುಗಳು, ಯುವಕ-ಯುವತಿಯರನ್ನು ಬಡಿದೆಬ್ಬಿಸುವ, ಕ್ರಾಂತಿಗೆ ಪಂಥಾಹ್ವಾನ ಕೊಡುವ ವಾಗ್ಝರಿ. ಕೇಳಿದವರ ಮೈಯಲ್ಲಿ ವಿದ್ಯುತ್ ಸಂಚಾರ.

[6ನೇ ಪುಟನೋಡಿ]

ಪ್ರತಿಗಾಮಿ ಪಿತೂರಿಗಳನ್ನು ಸೋಲಿಸಲು....

[4ನೇ ಪುಟದಿಂದ]

ಸ್ಥಾಪಿತ ಹಿತಾಸಕ್ತಿಗಳು ಕಳೆದ 22 ತಿಂಗಳುಗಳಲ್ಲಿ 50 ಮಂದಿ ಸಿ. ಪಿ. ಐ. (ಎಂ) ಕಾರ್ಯಕರ್ತರನ್ನು ಕೊಲೆಗೈದಿದ್ದಾರೆ. ಅಲ್ಲದೆ 4 ಆರ್. ಎಸ್. ಪಿ. ಮತ್ತು ಎರಡು ಫಾರ್‌ವರ್ಡ್ ಬ್ಲಾಕ್ ಕಾರ್ಯಕರ್ತರನ್ನು ಈ ಶಕ್ತಿಗಳು ಕೊಂದಿವೆ. ವಸ್ತುಸ್ಥಿತಿ ಹೀಗಿದ್ದರೂ, ಪಿ.ಸಿ. ಸೇನ್ ಮತ್ತು ಕಂಪನಿಯವರು 'ಸಿ. ಪಿ. ಐ. (ಎಂ) ನ ಹಿಂಸಾತ್ಮಕ ರಾಜಕೀಯ' ದ ಕುರಿತು ಬೊಬ್ಬಿಡುತ್ತಿದ್ದಾರೆ.

ಕಾಂಗ್ರೆಸ್ ತಂತ್ರಗಳು :

ಇದೇ ರೀತಿಯ ತಂತ್ರಗಳನ್ನು ಅನುಸರಿಸುತ್ತಾ ಕಾಂಗ್ರೆಸ್ಸಿನವರು ಒಂದೆಡೆ ರಾಜ್ಯದಲ್ಲಿ 'ಕಾನೂನು ಮತ್ತು ವ್ಯವಸ್ಥೆ' ಇಲ್ಲವೆಂದು ಬೊಬ್ಬಿಡುತ್ತಾರೆ; ಇನ್ನೊಂದೆಡೆ ಅವರೇ ಕಾನೂನು ಬಾಹಿರ ಚಟುವಟಿಕೆಗಳನ್ನು ಸಂಘಟಿಸುತ್ತಾರೆ. 'ಪವರ್ ಬೇಡಿಕೆ ದಿನಾಚರಣೆ' ಎಂದು ಹೇಳಿ ಕಾಂಗ್ರೆಸ್ ಬೆಂಬಲಿಗರೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪೂರಬಿಮುಖರ್ಜಿಯವರೂ ಮೇ 10 ರಂದು 'ರೈಟರ್ಸ್ ಬಿಲ್ಡಿಂಗ್' ನ್ನು ಬ್ಲೋಕೇಡು ಮಾಡಿದರು, ಮಂತ್ರಿಗಳ ಸ್ಥಾನಗಳನ್ನು ತಾವು ಆಕ್ರಮಿಸುವೆವು ಎಂದು ಬೆದರಿಕೆ ಹಾಕಿದರು.

ಈ ಸಲ ತಕ್ಕ ಬಂದೋಬಸ್ತು ಕ್ರಮಗಳನ್ನು ವಹಿಸಿದುದರಿಂದ 'ಬ್ಲೋಕೇಡ್' ವಿಫಲವಾಯಿತು. ಆಗ ಕಾಂಗ್ರೆಸ್ಸಿನವರಿಂದ ವಿಸ್ತೃತ ಹಿಂಸೆಯನ್ನು ಸಂಘಟಿಸಲಾಯಿತು. ಅವರು ಬೇರೆ ಬೇರೆ ಬೀದಿಗಳಲ್ಲಿ 'ಟ್ರಾಫಿಕ್' ಸ್ತಂಭನಗೊಳಿಸಲಿಕ್ಕೂ ಪೋಲೀಸ್ ಪಿಕೇಟ್‌ಗಳನ್ನು ಆಕ್ರಮಿಸಲಿಕ್ಕೂ ಪ್ರಯತ್ನಿಸಿದರು. ಕನಿಷ್ಟ ಬಲ ಪ್ರಯೋಗದಿಂದ ಈ ಎಲ್ಲಾ ಪ್ರಯತ್ನಗಳನ್ನು ಪೋಲೀಸರು ವಿಫಲಗೊಳಿಸಿದರು. ಕೆಲವೇ ಕೆಲವು 'ಅಶ್ರುವಾಯು' ಷೆಲ್‌ಗಳನ್ನು ಉಪಯೋಗಿಸಲಾಯಿತು. ಎಲ್ಲಿಯೂ ಲಾಠಿ ಚಾರ್ಜು ನಡೆಯಲಿಲ್ಲ. ಕೆಲವರನ್ನು ದಸ್ತಗಿರಿ ಮಾಡಿ ಕೊನೆಗೆ, ಅವರನ್ನು ಬಿಡುಗಡೆಗೊಳಿಸಲಾಯಿತು. ಸ್ವಲ್ಪ ಸಮಯದಲ್ಲೇ ಆ ಪ್ರದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲಾಯಿತು.

ಈ ಘಟನೆಯ ಕುರಿತು ವರದಿಗಾರರಿಗೆ ವರದಿಯನ್ನೀಯುತ್ತಾ ರೆವಿನ್ಯೂ ಮಂತ್ರಿ ಬಿನೋಯ್ ಚೌಧರಿಯವರು 'ಪ್ರತಿಯೊಂದು ರಾಜಕೀಯ ಪಕ್ಷಕ್ಕೆ ಪ್ರದರ್ಶನವನ್ನು ನಡೆಸುವ ಹಕ್ಕಿದೆ. ಆದರೆ 'ರೈಟರ್ಸ್ ಬಿಲ್ಡಿಂಗ್' ಗಳನ್ನು ಹಿಡಿದು ಮಂತ್ರಿಗಳ ಸ್ಥಾನಗಳನ್ನು ಆಕ್ರಮಿಸುವುದು ಒಂದು ಪ್ರಜಾಸತ್ತಾತ್ಮಕ ಚಳುವಳಿಯೆಂದು ಹೇಳಲು ಸಾಧ್ಯವಿಲ್ಲ. ಯಾವುದೇ ಸರಕಾರವು ಅಂತಹ ಪ್ರಯತ್ನವನ್ನು ಸಹಿಸಲಾರದು'ಎಂದು ಹೇಳಿದರು.

ಅಡೆತಡೆಗಳನ್ನು ತೆಗೆಯಲು ಪೋಲೀಸರು ಪುನಃ ಪುನಃ ಕಾಂಗ್ರೆಸ್ಸಿಗರನ್ನು ಕೇಳಿಕೊಂಡು ಕೊನೆಗೆ ಅತ್ಯಲ್ಪ ಶಕ್ತಿಯನ್ನು ಉಪಯೋಗಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು.

ಕಾಂಗ್ರೆಸ್ ಹಿಂಬಾಲಕರ ಪ್ರದರ್ಶನದಲ್ಲಿ ಜನ ಬಹಳ ಕಡಿಮೆ ಇದ್ದರು, ಸುಬ್ರತಾಮುಖರ್ಜಿಯವರು ಈಗ ಕಾಂಗ್ರೆಸ್ (ಐ) ಮುಂದಾಳಾಗಿ 'ಕೆಲವೇ ಕೆಲವು ಬೆಂಬಲಿಗರನ್ನು ಕೂಡಿಬೀದಿಗಿಳಿಯುವ ಕಾರ್ಯಕ್ರಮ"ವನ್ನು ಗೇಲಿಮಾಡಿದರು. ಕಾಂಗ್ರೆಸ್ (ಐ) ಪ್ರಯತ್ನಪಟ್ಟಿದ್ದರೂ ಪರಿಣಾಮ ಇದೇ ಆಗುತ್ತಿತ್ತು.

ಜನತೆಯನ್ನು ಒಟ್ಟುಗೂಡಿಸುವುದು :

ಅದೇ ದಿನ ಸಂಜೆ ಕಲ್ಕತ್ತಾದ ಎಸ್ಪ್ಲೆನೇಡ್ ಈಸ್ಟ್‌ನಲ್ಲಿ ಎಡರಂಗದ ಪಕ್ಷಗಳು ಒಂದು ಬೃಹತ್ ಬಹಿರಂಗ ಸಭೆಯನ್ನು ಸಂಘಟಿಸಿದವು.

ಬೆಳಿಗ್ಗೆಯಿಂದಲೇ ಎಡರಂಗದ ಬೆಂಬಲಿಗರು ಸಹಸ್ರಾರು ಸಂಖ್ಯೆಯಲ್ಲಿ ಹಲವಾರು ಸ್ಥಳಗಳಲ್ಲಿ ಒಟ್ಟುಸೇರುತ್ತಿದ್ದರು. ಈ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ ಉದ್ದವಾದ ಮೆರವಣಿಗೆಗಳನ್ನು ಸಂಘಟಿಸಲಾಯಿತು. ಈ ಸಭೆಗಳಲ್ಲಿ ಎಡರಂಗ ಸರ್ಕಾರದ ವಿರುದ್ಧ ನಡೆಯುವ ಪಿತೂರಿಯನ್ನು ಸೋಲಿಸಲು ಜನತೆ ಮುಂದಾಗಬೇಕೆಂದೂ, ಕಾಂಗ್ರೆಸ್ ಆ ದಿನ ಅರಾಜಕತೆಯುಂಟುಮಾಡುವ ಪಿತೂರಿಯನ್ನು ತಡೆಯುವ ಕ್ರಮ ವಹಿಸಬೇಕೆಂದು ಕರೆ ನೀಡಲಾಯಿತು. ಮಧ್ಯಾಹ್ನ ಎಸ್ಪ್ಲೆನೇಡ್ ಈಸ್ಟ್‌ನಲ್ಲಿ ಎಲ್ಲಾ ಮೆರವಣಿಗೆಗಳನ್ನು ಸೇರಿಸಲಾಯಿತು.

ಸಭೆಯನ್ನುದ್ದೇಶಿಸಿ ಲೇಬರ್ ಮಂತ್ರಿ ಕೃಷ್ಣಪಾದಘೋಷ್ ಮತ್ತು ಸಿ.ಪಿ.ಐ.(ಎಂ.)ನ ಕಲ್ಕತ್ತಾ ಜಿಲ್ಲಾ ಸಮಿತಿ ಕಾರ್ಯದರ್ಶಿ ಲಕ್ಷ್ಮಿಸೇನರು ಭಾಷಣವನ್ನಿತ್ತರು. ಕಂದಾಯ ಮಂತ್ರಿ ಬಿನೋಯ್‌ಚೌಧರಿಯವರು ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ಸಿನ ಪಿತೂರಿಯನ್ನು ಸೋಲಿಸುವ ಸಲುವಾಗಿ ಒಟ್ಟುಸೇರಿ ಕಾರ್ಯಕ್ರಮ ಹಾಕಿದ ಬಗ್ಗೆ ಜನತೆಯನ್ನು ಕೊಂಡಾಡಿದ ಭಾಷಣಕರ್ತರು 'ಮುಂದೆ ಯಾವುದೇ ಪಿತೂರಿ ನಡೆಸಿದರೂ ಅದನ್ನು ಸೋಲಿಸಲು ಮುಂದಾಗಬೇಕು' ಎಂದು ಅರಿಕೆ ಮಾಡಿಕೊಂಡರು.

ಘಟನೆ ನಡೆದ ದಿನ ದಿಲ್ಲಿಯಲ್ಲಿದ್ದ ಮುಖ್ಯಮಂತ್ರಿ ಕಾಂ. ಜ್ಯೋತಿಬಸುರವರನ್ನು ಮರುದಿನ ಕಾಂಗ್ರೆಸ್ ಪ್ರತಿನಿಧಿಗಳ ತಂಡವು ಭೇಟಿಯಾದಾಗ 'ನಿಮ್ಮ ಸವಾಲನ್ನು ರಾಜಕೀಯವಾಗಿ ನಾವು ಎದುರಿಸುವೆವು' ಎಂದು ಹೇಳಿದರು.

ಈ ಘಟನೆಯ ಕುರಿತು ಹೇಳಿಕೆಯನ್ನಿತ್ತ ಕಾಂ. ಪ್ರಮೋದ್ ದಾಸ್ ಗುಪ್ತರು ಹೀಗೆಂದರು ; "ಎಡರಂಗ ಸರಕಾರವು ರಾಜ್ಯದಲ್ಲಿ ಅಧಿಕಾರ ವಹಿಸಿದಂದಿನಿಂದ ಪ್ರತಿಯೊಬ್ಬನಿಗೂ ಯಾವುದೇ ರಾಜಕೀಯ ಅಭಿಪ್ರಾಯವಿದ್ದಾಗ್ಯೂ ಸಭೆ, ಮೆರವಣಿಗೆ, ಪ್ರದರ್ಶನ ಕರೆಯಲು ಹಕ್ಕನ್ನು ಕೊಟ್ಟಿದೆ. ಕಳೆದ ಚುನಾವಣೆಯ ನಂತರ ಈ ರಾಜ್ಯದಲ್ಲಿ ಮಾತ್ರ, ಇಂದಿರಾಗಾಂಧಿಗೆ ಶಾಂತರೀತಿಯಲ್ಲಿ ಸಭೆ ನಡೆಸುವುದಕ್ಕೆ ಸಾಧ್ಯ. ಆದರೆ ಚಳುವಳಿಗಳ ಹೆಸರಿನಲ್ಲಿ ಅರಾಜಕತೆಯನ್ನುಂಟುಮಾಡುವುದು ಒಂದು ಪ್ರಜಾಸತ್ತಾತ್ಮಕ ಪಕ್ಷವಲ್ಲ".

ಮೇ 10ರ ಎಸ್ಪ್ಲನೇಡ್ ಸಭೆಯು ಎಡರಂಗ ಸಮಿತಿಯು ಯೋಜಿಸಿದ ಮೂರುವಾರ ಕಾಲದ ಚಳುವಳಿಯ ಆರಂಭದ ಸಭೆಯಾಗಿತ್ತು.

ವಿಶೇಷ ಸಭೆ ಮೆರವಣಿಗೆಗಳಲ್ಲದೆ ಪ್ರತಿಯೊಂದು ಪ್ರದೇಶದಲ್ಲೂ ಕಾಂಗ್ರೆಸ್ ಬೆಂಬಲಿತ ಸಮಾಜ ವಿದ್ರೋಹಿಗಳು 'ಗಲಭೆ 'ಉಂಟುಮಾಡುವುದನ್ನು ತಡೆಯಲು ಜನರನ್ನು ಸಂಘಟಿಸುವ ಕೆಲಸವು ನಡೆಯುತ್ತಿದೆ.

ಇತ್ತೀಚೆಗೆ ಶ್ರೀ ಸೇನರ ಮತ್ತವರ ಬೆಂಬಲಿಗರ ಚಳುವಳಿಗೆ ಇನ್ನೊಂದು ಕಾರಣವಾದ ದಂಡಕಾರಣ್ಯದ ನಿರಾಶ್ರಿತರು'ಮರೀಚಜಾನಪಿ'ಯಿಂದ ದಂಡಕಾರಣ್ಯಕ್ಕೆ ಹಿಂತಿರುಗುವ 'ಶಿಬಿರ'ಗಳಿಗೆ ಹೋಗುತ್ತಿದ್ದಾರೆ.

ಕೆಲವೇ ಕೆಲವು ನಿರಾಶ್ರಿತ ಮುಂದಾಳುಗಳೂ, ಜನತಾಪಕ್ಷದ ಒಂದು ವಿಭಾಗವೂ ಇದ್ದ 'ಉದ್ವಸ್ತು ಉನ್ನಯಾನ್ ಶೀಲ ಸಮಿತಿ' ಯ ಸ್ವಾರ್ಥತೆ ಈ 8000 ನಿರಾಶ್ರಿತರು ಒಂದು ವರ್ಷ ಕಾಲ ಎಡರಂಗ ಸರಕಾರದ ವಿರುದ್ಧ ಪ್ರತಿಭಟಿಸಲು ಕಾರಣ. ಅವರೂ, ಎರಡೂ ಕಾಂಗ್ರೆಸ್‌ಗಳೂ ಸೇರಿ ಈ ವಿಷಯದಲ್ಲಿ 'ಬೊಬ್ಬೆ' ಹಾಕುತ್ತಾ ಬಂದಿದ್ದರು.

ರಾಜ್ಯ ಸರಕಾರವು ಬಲಪ್ರಯೋಗದ ಬದಲು 'ಸಮಾಧಾನ' ದಿಂದ ಅವರ ಮನ ಒಲಿಸಿತು.

ಕೊನೆಗೆ ಮೇ 14 ರಂದು 'ಮರೀಚಜಾನಪಿ' ಯನ್ನು ಬಿಟ್ಟು ಹೋಗುವುದಕ್ಕೆ ನಿರಾಶ್ರಿತರು ಒಪ್ಪಿಕೊಂಡು ದಂಡಕಾರಣ್ಯದೆಡೆಗೆ ಹೋಗಲು ಉಪಕ್ರಮಿಸಿದ್ದಾರೆ.

●

ಪೋಲೀಸರ ಸಂಘಟನೆ ಮತ್ತು ಬೇಡಿಕೆಗಳಿಗೆ ಸಿ.ಐ.ಟಿ.ಯು. ಬೆಂಬಲ

ಪಂಜಾಬಿನಿಂದ ಪ್ರಾರಂಭವಾಗಿ ಇತರ ರಾಜ್ಯಗಳಿಗೆ ಹರಡಿ ನಮ್ಮ ರಾಜ್ಯದ ಪೋಲೀಸರಲ್ಲಿಯೂ ಸಂಘಟನೆಯ ಅರಿವನ್ನು ಮೂಡಿಸಿರುವ ಕ್ರಿಯಾ ಚರಣೆಯನ್ನು ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಸಮಿತಿಯು ಸ್ವಾಗತಿಸುತ್ತದೆ.

ನಮ್ಮ ರಾಜ್ಯದ ಪೋಲೀಸರು ತಮಗೆ ಸಂಘ ಕಟ್ಟುವ ಹಕ್ಕು ಬೇಕು, ಸರ್ಕಾರವು ಸಂಘಕ್ಕೆ ಮನ್ನಣೆ ಕೊಡಬೇಕು, ಮೇಲಧಿಕಾರಿಗಳು ಪೋಲೀಸ್ ಕಾನ್‌ಸ್ಟೇಬಲ್ ಮೊದಲಾದ ಕೆಳ ದರ್ಜೆಯ ನೌಕರರನ್ನು ಬಯ್ಯುವುದು, ಹೆದರಿಸುವುದು, ಅವರ ಮೇಲೆ ದಬ್ಬಾಳಿಕೆ ನಡೆಸುವುದು ಕೊನೆಯಾಗಬೇಕು-ಇತ್ಯಾದಿ ಬೇಡಿಕೆಗಳನ್ನು ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಸಮಿತಿಯು ಬೆಂಬಲಿಸುತ್ತದೆ.

ಪಶ್ಚಿಮ ಬಂಗಾಳ ಮತ್ತು ತ್ರಿಪುರ ವಾಮರಂಗ ಸರಕಾರಗಳು ವಿಳಂಬ ಮಾಡದೆ ಆ ರಾಜ್ಯಗಳ ಪೋಲೀಸರ ಸಂಘಗಳಿಗೆ ಮನ್ನಣೆ ಕೊಟ್ಟು, ಕೈಗಾರಿಕಾ ಕಾರ್ಮಿಕರಿಗೆ ಸಿಕ್ಕುವಂತೆ ಅವರಿಗೆ ಬೋನಸ್ ಸಹ ಕೊಟ್ಟು ಇತರ ರಾಜ್ಯ ಸರ್ಕಾರಗಳಿಗೆ ಮೇಲ್ಪಂಕ್ತಿ ಹಾಕಿ ಕೊಟ್ಟಿವೆ. ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸರು ನಮ್ಮ ರಾಜ್ಯದ ಪೋಲೀಸರ ಸಂಘಕ್ಕೆ ಮನ್ನಣೆ ಕೊಟ್ಟು ಅವರ ಬೇಡಿಕೆಗಳನ್ನು ಈಡೇರಿಸಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಿ.ಐ.ಟಿ.ಯು.ವಿನ ಕರ್ನಾಟಕ ರಾಜ್ಯ ಸಮಿತಿಯು ಆಗ್ರಹಪಡಿಸುತ್ತದೆ ಎಂಬುದಾಗಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ಪತ್ರಿಕಾ ಹೇಳಿಕೆಯಿತ್ತಿರುವರು.

○

ಕನಿಷ್ಠ ವೇತನಕ್ಕಾಗಿ ಬೀಡಿ ಕಾರ್ಮಿಕರ ಹೋರಾಟ

ಕೋಲಾರ ಜಿಲ್ಲೆಯಲ್ಲಿ 21-5-79 ರಂದು ನಡೆದ ಬೀಡಿ ಕಾರ್ಮಿಕರ ಮುಷ್ಕರದ ಫಲವಾಗಿ "ಜನರಲ್ ವರ್ಕರ್ಸ್ ಯೂನಿಯನ್"ನ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಹೆಚ್. ಅಬ್ದುಲ್ ಮಜೀದ್ ಅವರಿಗೆ, ಕೋಲಾರ ವಿಭಾಗದ ಲೇಬರ್ ಆಫೀಸರ್ ಅವರು ಬೀಡಿ ಕಾರ್ಮಿಕರ ಅರ್ಜಿಗಳ ಬಗ್ಗೆ ವಿಚಾರಣೆ ನಡೆಸುವುದಾಗಿಯೂ ಸದ್ಯದಲ್ಲೇ ಬೀಡಿ ಮಾಲೀಕರ ಜಂಟಿ ಸಭೆಯನ್ನು ಕರೆದು, ಏಪ್ರಿಲ್ 2 ರಿಂದ ಹೆಚ್ಚುವರಿ ಕೂಲಿ ದೊರಕಿಸುವ ಭರವಸೆ ನೀಡಿದರು. ಮುಲಬಾರ್ ಬೀಡಿ ಫ್ಯಾಕ್ಟರಿಯ ಮಾಲೀಕರು ಈಗಾಗಲೇ ತಮ್ಮ ಕೆಲಸಗಾರರಿಗೆ ಒಂದು ಸಾವಿರ ಬೀಡಿಗೆ 5-75 ರೂ. ಗಳ ಕನಿಷ್ಠ ವೇತನ ಜಾರಿ ಮಾಡಿದ್ದಾರೆ.

ಕೋಲಾರ ಸರ್ಕಲ್ ಲೇಬರ್ ಇನ್‌ಸ್ಪೆಕ್ಟರ್ ಅವರಿಗೆ ಬೀಡಿ ಕಾರ್ಮಿಕರ ಎಲೆ ಆವರೇಜ್ ಹಾಗು ಹೊಗೆಸೊಪ್ಪು ಇತ್ಯಾದಿಗಳ ವಿಚಾರದಲ್ಲಿ ಆಗುತ್ತಿರುವ ಕೂಲಿನಷ್ಟವನ್ನು ಪರಿಶೀಲಿಸಲು ಆದೇಶ ನೀಡಲಾಗಿದೆ. ಕಾರ್ಮಿಕರಿಗೆ ಪ್ರತಿವಾರ ಕೂಲಿ ದೊರೆಯುವ ಹಾಗೆ ಒಬ್ಬ ಕಂಟ್ರಾಕ್ಟರಬಳಿ ಈ ಲೇಬರ್ ಇನ್‌ಸ್ಪೆಕ್ಟರ್ ಹಾಜರಿರಬೇಕೆಂದೂ ಆದೇಶ ನೀಡಲಾಗಿದ್ದು ಈ ಪ್ರಕಾರ ಅವರು 26-5-79 ರಂದು ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಕಂಟ್ರಾಕ್ಟರ್ ನಂ. 2 ರಿಗೆ ಭೇಟಿ ನೀಡಿದ್ದಾರೆ.

ಕಂಟ್ರಾಕ್ಟರ್ ನಂ. 2 ಆದ ಅಲ್ಲಾಭಕ್ಷ್ ಅವರ ಸಂಬಂಧದಲ್ಲಿ ಲಾಸ್ ಚುಕ್ ಮತ್ತಿತರ ವಿಚಾರಗಳಲ್ಲಿ ಇರುವ ಅನ್ಯಾಯಗಳ ಬಗ್ಗೆ ಇನ್‌ಸ್ಪೆಕ್ಟರ್ ಅವರು ವಿಚಾರಣೆ ನಡೆಸಿದ್ದಾರೆ. ಕಾರ್ಮಿಕರಿಗೆ ಆಗುತ್ತಿರುವ ಶೋಷಣೆಯ ಬಗ್ಗೆ ಇನ್‌ಸ್ಪೆಕ್ಟರ್ ಹನುಮಯ್ಯ ಅವರು ಆಶ್ಚರ್ಯ ವ್ಯಕ್ತಪಡಿಸಿ, ಕಂಟ್ರಾಕ್ಟರ್‌ಗಳ ನಡವಳಿಕೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೇಲಧಿಕಾರಿಗಳಿಗೆ ಸೂಚಿಸುವುದಾಗಿ ಹೇಳಿದ್ದಾರೆ. ●

ಕೊಡಗು ಪೌರ ಕಾರ್ಮಿಕರ ಸಭೆ

ತಾರೀಕು 2-6-79 ರಂದು ಕರ್ನಾಟಕ ಲೋಕಲ್ ಬಾಡೀಸ್ ಎಂಪ್ಲಾಯೀಸ್ ಮತ್ತು ಪೌರ ಕಾರ್ಮಿಕರ ಫೆಡರೇಷನ್ನಿನ ಕೊಡಗು ಶಾಖೆಯ ಕಾರ್ಯಕಾರಿ ಸಮಿತಿಯ ಸಭೆಯು ತಾರೀಕು 2-6-79 ರಂದು ಮೈಸೂರು ವಿಭಾಗದ ಅಧ್ಯಕ್ಷರಾದ ಡಾ॥ ಐ.ಆರ್. ಅಸ್ರಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ವಿಭಾಗದ ಜನರಲ್ ಸೆಕ್ರೆಟರಿಯಾದ ಸಿ. ಕೆ. ಮೋಹನ್‌ರವರು ಸ್ಥಳೀಯ ಸಂಸ್ಥೆಗಳ ನೌಕರರು ಎದುರಿಸುತ್ತಿರುವ ಪ್ರಶ್ನೆಗಳ ಕುರಿತು ಸಭೆಗೆ ವಿವರವನ್ನಿತ್ತರು. ಮುಖ್ಯವಾಗಿ ಪೌರ ಕಾರ್ಮಿಕರ ನಿವೃತ್ತಿ ವೇತನ, ಗ್ರಾಚ್ಯುಟಿ ಇವುಗಳು ಸಿಗದೆ ಇರುವುದು. ಅಕ್ಟ್ರಾಯಿ ರದ್ದಾದುದರಿಂದ ಆ ವಿಭಾಗದ ಕೆಲಸಗಾರರ ಭವಿಷ್ಯ ಇದರ ಕುರಿತು ಸರಕಾರದ ಗಮನಕ್ಕೆ ಅನೇಕ ಬಾರಿ ಮನವಿ ಮಾಡಿಕೊಂಡಿದ್ದರೂ ಏನೇನೂ ಫಲಕಾರಿಯಾಗಿಲ್ಲ. ಆದುದರಿಂದ ತಾ॥ 20-8-79 ರಂದು ಕರ್ನಾಟಕ ರಾಜ್ಯದಾದ್ಯಂತ ಮುಷ್ಕರ ಹೂಡುವ ಕೇಂದ್ರ ಸಮಿತಿಯ ನಿರ್ಧಾರವನ್ನು ಬೆಂಬಲಿಸುವ ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

○

ಸಾಹಿತಿಗಳು ಶೋಷಣೆಯ ವಿವಿಧ ಮುಖಗಳನ್ನು ತೋರಿಸಲಿ

[5ನೇ ಪುಟದಿಂದ]

ಪರುಳೇಕರ್ ಅವರ ಮಾತುಗಳು ತುಂಬ ಮೌಲಿಕ. ಅವರ ಅಭಿಪ್ರಾಯ, ಕ್ರಾಂತಿ ಬಯಸಿ ನುಗ್ಗುವ ಯುವಜನತೆಗೆ ದಿಕ್ಸೂಚಿಯೂ ಆಗಬಹುದು. ಈ ದೃಷ್ಟಿಯಿಂದ ಪರುಳೇಕರ್ ಅವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ :

ಪ್ರಶ್ನೆ : ಖಡ್ಗವಾಗಲಿ ಕಾವ್ಯ... ಇದು ಕರ್ನಾಟಕದ ಬಂಡಾಯ ಸಾಹಿತಿಗಳ ಘೋಷಣಾ ವಾಕ್ಯ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಪರುಳೇಕರ್ : ಹೌದು, ಅದರಲ್ಲಿ ಅನುಮಾನವೇ ಇಲ್ಲ. ಕಾವ್ಯ ಖಡ್ಗವಾಗಬೇಕು. ಸಾಮಾಜಿಕ ಪರಿವರ್ತನೆಗೆ ಅಗತ್ಯವಾದ ಸಮುದಾಯ ಹೋರಾಟಕ್ಕೆ ಎರಡು ಬಗೆಯ ಸೇನೆ ಬೇಕು. ಒಂದು ಶಸ್ತ್ರ ಹಿಡಿದ ಸೇನೆ. ಮತ್ತೊಂದು ಲೇಖನಿ ಹಿಡಿದ ಸೇನೆ. ಪ್ರಗತಿಪರ ಧೋರಣೆಯ ಬರಹಗಳ ಮೂಲಕ ಈ ಲೇಖನಿ ಹಿಡಿದ ಸೇನೆ ಪ್ರಗತಿಶೀಲ ಹೋರಾಟಗಾರರಿಗೆ ಬೆಂಬಲವಾಗಿ ನಿಲ್ಲಬೇಕು. ಆಗ ಮಾತ್ರ ಯಾವುದೇ ಪರಿವರ್ತನೆಯ ಕನಸು ನನಸಾಗುವುದು ಸಾಧ್ಯ. ಗಾರ್ಕಿ, ಟಾಲ್‌ಸ್ಟಾಯ್ ಮಾಡಿದ್ದೂ ಇದನ್ನೇ.

ಪ್ರಶ್ನೆ : 'ಕಲೆಗಾಗಿ ಕಲೆ' ಎಂಬ ವಾದವೊಂದಿದೆಯಲ್ಲಾ ?

ಪರುಳೇಕರ್ : ಇದು ಸುಳ್ಳು. ಕಲೆಗಾಗಿ ಯಾವ ಕಲೆಯೂ ಇಲ್ಲ. ಉತ್ತಮ ಸಾಹಿತ್ಯಕ್ಕೆ ಮೂಲ ಸೆಲೆ ಇರುವುದು ಜನತೆಯ ಬದುಕಿನ ನಡುವೆ. ಸಾಹಿತಿಯಾದವನು ಜನತೆಯ ಹೋರಾಟದ ನಡುವೆ ಇದ್ದರೆ ಹೆಚ್ಚು ಸಮರ್ಥಶಾಲಿಯಾಗಿ ಬದುಕನ್ನು ಚಿತ್ರಿಸಬಲ್ಲ. ಜನರ ನಾಡಿ ಮಿಡಿತ ಬಲ್ಲ ಲೇಖನಿಯಿಂದ ಬರುವ ಸಾಹಿತ್ಯವೇ ಉತ್ತಮ ಸಾಹಿತ್ಯವಾಗಬಲ್ಲದು. ಈ ಮಾತಿಗೆ ಗಾರ್ಕಿ, ಟಾಲ್‌ಸ್ಟಾಯ್ ಅವರುಗಳನ್ನೇ ಮತ್ತೆ ಉದಾಹರಣೆಯಾಗಿ ನೀಡಬಹುದು.

ಪ್ರಶ್ನೆ : ನಿಮ್ಮ ದೃಷ್ಟಿಯಲ್ಲಿ 'ಸಾಮಾಜಿಕ ಬದಲಾವಣೆ' ಎಂದರೇನು ?

ಪರುಳೇಕರ್ : ನನ್ನ ದೃಷ್ಟಿಯಲ್ಲಿ ಸಾಮಾಜಿಕ ಬದಲಾವಣೆ ಎಂದರೆ ಜನತೆಗೆ ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವ ದೊರೆಯುವುದು. ಭಾರತದಲ್ಲಿ ದುಡಿಯುವ ವರ್ಗವೇ ಪ್ರಧಾನವಾಗಿರುವುದರಿಂದ, ಈ ವರ್ಗದ ನಾಯಕತ್ವದಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಿದಾಗಲೇ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರುವುದು. ಆಗಲೇ ಈ ಸಮಾಜದ ಪರಿವರ್ತನೆ ಸಾಧ್ಯ. ನಿಜವಾದ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ನಮ್ಮೆಲ್ಲರ ಹೋರಾಟ. ಇದಕ್ಕಾಗಿ ಪ್ರಗತಿಶೀಲ ಲೇಖಕರೂ ಬೆಂಬಲವಾಗಿ ನಿಲ್ಲಬೇಕು.

ಪ್ರಶ್ನೆ : ಈ ಬಗೆಯ ಬದಲಾವಣೆಯನ್ನು ನೀವು ಯಾರಿಂದ ನಿರೀಕ್ಷಿಸುತ್ತೀರಿ ? ರಾಜಕಾರಣಿಗಳಿಂದಲೇ ? ಸಾಮಾಜಿಕ ಕಾರ್ಯಕರ್ತರಿಂದಲೇ ? ಅಥವಾ ಲೇಖಕ ಕಲಾವಿದರಿಂದಲೇ ?

ಪರುಳೇಕರ್ : ಎಲ್ಲರಿಂದಲೂ. ಆದರೆ ರಾಜಕೀಯವಾಗಿ ತಮ್ಮನ್ನು ತಾವು ಸಮರ್ಥಿಸಿಕೊಂಡ ಒಂದು ಗುಂಪು ಈ ಬದಲಾವಣೆಗಾಗಿ ನಡೆಯುವ ಹೋರಾಟದ ಮುಂಚೂಣಿಯಲ್ಲಿ ನಿಲ್ಲಬೇಕು. ಹೆಚ್ಚು ನಿಖರವಾಗಿ ಹೇಳಬೇಕೆಂದರೆ ಕಮ್ಯೂನಿಸ್ಟರು ಈ ರಾಷ್ಟ್ರದಲ್ಲಿ ಬದಲಾವಣೆ ತರಬಹುದು-ಎಂದರೆ 'ವೈಜ್ಞಾನಿಕ ಸಮಾಜವಾದ'ವನ್ನು ತರಬಹುದು. ಲೇಖಕರೂ-ಕಲಾವಿದರು-ಸಾಮಾಜಿಕ ಕಾರ್ಯಕರ್ತರು ಉಳಿದೆಲ್ಲ ಪ್ರಗತಿಶೀಲರು ಇವರಿಗೆ ಬೆಂಬಲವಾಗಿ ನಿಲ್ಲಬೇಕು. ಆಗ ಮಾತ್ರ ಬದಲಾವಣೆ ಸಾಧ್ಯ.

ಪ್ರಶ್ನೆ : 'ವೈಜ್ಞಾನಿಕ ಸಮಾಜವಾದ' ಎಂದರೇನು ?

ಪರುಳೇಕರ್ : ಈ ದಿನಗಳಲ್ಲಿ ಎಲ್ಲ ಜನರೂ ಎಲ್ಲ ಪಕ್ಷಗಳೂ 'ಸಮಾಜವಾದ'ದ ಮಾತನಾಡುತ್ತಿದ್ದಾರೆ. ಆದ್ದರಿಂದ ಈ ಶಬ್ದವನ್ನು ಬಳಸುವುದಕ್ಕೇ ಭಯವಾಗುತ್ತದೆ. ಹೀಗಾಗಿ 'ವೈಜ್ಞಾನಿಕ ಸಮಾಜವಾದ' ಎಂದೆ. ಇದರ ಅರ್ಥ ಈ ಸಮಾಜ ತೊಟ್ಟಿರುವ ಬಂಡವಾಳಶಾಹಿ, ಬೂರ್ಜ್ವಾ ಉಡುಗೆಯನ್ನು ಕಿತ್ತುಹಾಕುವುದು. ಶೋಷಣೆಯನ್ನು ಅಂತ್ಯಗೊಳಿಸಿ, ಎಲ್ಲರೂ ಪ್ರಜಾಪ್ರಭುತ್ವದ ಲಾಭಗಳನ್ನು ಪಡೆಯುವಂತೆ ಮಾಡುವುದು. ಇದೇ ನಿಜವಾದ ಸಮಾಜವಾದ, ವೈಜ್ಞಾನಿಕ ಸಮಾಜವಾದ.

ಪ್ರಶ್ನೆ : ಈ ದಿಕ್ಕಿನಲ್ಲಿ, ಕಲೆ-ಸಾಹಿತ್ಯಗಳು ಹೇಗೆ ನೆರವಾಗಬಹುದು ?

ಪರುಳೇಕರ್ : ನಾಟಕ, ಸಿನೆಮಾ, ಬೀದಿ ನಾಟಕ, ಜಾತ್ರಾ, ತಮಾಷಾ ಇತ್ಯಾದಿಗಳ ಮೂಲಕ ಜನತೆಗೆ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯವನ್ನು, ಶೋಷಣೆಯ ವಿವಿಧ ಮುಖಗಳನ್ನು ತೋರಿಸಬೇಕು. ಜನ ಜಾಗೃತರಾಗುವಂತೆ ಮಾಡಬೇಕು. ಸಾಹಿತ್ಯ ಕೃತಿಗಳೂ ಇದೇ ಕಾರ್ಯವನ್ನು ಮಾಡಬೇಕು. 'ಮಾನವ ಎಚ್ಚೆತ್ತಾಗ' ಕೃತಿಯಲ್ಲಿ ನಾನು ಮಾಡಿರುವುದೂ ಇದನ್ನೇ.

ಪ್ರಶ್ನೆ : ನಮ್ಮ ಸಮಾಜದಲ್ಲಿ ಭೂತನೃತ್ಯ ಮಾಡುತ್ತಿರುವ ನಿರುದ್ಯೋಗ, ಜಾತೀಯತೆ, ಶೋಷಣೆ ಇತ್ಯಾದಿಗಳನ್ನು ಹೊಡೆದೋಡಿಸಲು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು ?

ಪರುಳೇಕರ್ : ರಾಜಕೀಯ ಪಕ್ಷವೊಂದಕ್ಕೆ ಬದ್ಧವಾದ ಕಾರ್ಯಕರ್ತರ ಒಂದು ತಂಡವೇ ಇದಕ್ಕೆ ಬೇಕು. ಎಲ್ಲ ಪ್ರಗತಿಪರ ಹೋರಾಟಗಾರರೂ ಇವರಿಗೆ ಕುಮ್ಮಕ್ಕು ನೀಡಬೇಕು, ಬರಹಗಾರರು ಕಲ್ಪನಾ ಜಗತ್ತಿನಿಂದ ಹೊರಬಂದು, ಪ್ರೇಮ-ಕಥೆಗಳನ್ನು ಹೆಣೆಯುವುದು ಬಿಟ್ಟು ವಾಸ್ತವ ಬದುಕಿನ ಸತ್ಯಗಳನ್ನು ತಮ್ಮ ಕೃತಿಗಳಲ್ಲಿ ಹಿಡಿದಿಡಬೇಕು.

ಪ್ರಶ್ನೆ : ಬಂಡಾಯ ಸಾಹಿತ್ಯ ಸಮ್ಮೇಳನದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಪರುಳೇಕರ್ : ಬಂಡಾಯ ಸಾಹಿತ್ಯ ಸಮ್ಮೇಳನವನ್ನು ನಾನು ಸ್ವಾಗತಿಸುತ್ತೇನೆ. ಯಾವ ಬರಹಗಾರರೂ ಇದನ್ನು ವಿರೋಧಿಸಬೇಕಾಗಿಲ್ಲ. ಶೋಷಣೆಯನ್ನು ಅಂತ್ಯಗೊಳಿಸಬೇಕೆಂದು ಬಯಸುವ ಶಕ್ತಿಗಳೆಲ್ಲ ಈ ಮೇಳಕ್ಕೆ ಬೆಂಬಲ ಕೊಡಬೇಕು. ಕನ್ನಡ ಸಾಹಿತ್ಯ ಪರಿಷತ್ತೂ ಈ ಬಂಡಾಯ ಮೇಳವನ್ನು ವಿರೋಧಿಸಬೇಕಿಲ್ಲ. ಹಾಗೆಯೇ ಕನ್ನಡ ಸಾಹಿತ್ಯ ಸಮ್ಮೇಳನವನ್ನೂ ಬಂಡಾಯಗಾರರು ವಿರೋಧಿಸುವ ಅಗತ್ಯವಿಲ್ಲ. ಸಮಾಜ ಬದಲಾವಣೆಗೆ ಶಸ್ತ್ರಹಿಡಿದ ಸೇನೆಯಾಗಿ ಬಂಡಾಯ ಬರಹಗಾರರು ಬೆಳೆದು ಬರಬೇಕೆಂಬುದೇ ನನ್ನ ಆಶಯ. ●

ಹುಳಿಯಾರಿನಲ್ಲಿ ಕಾರ್ಮಿಕರ ಯಶಸ್ವಿ ಹೋರಾಟ

ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹುಳಿಯಾರಿನಲ್ಲಿರುವ ವಾಸವಿ ಟೈಲ್ ಫ್ಯಾಕ್ಟರಿಯು 20 ದಿನಗಳಿಂದ ಲಾಕೌಟ್ ಆಗಿತ್ತು. ತುಮಕೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಹೆಚ್.ಸಿ. ಚನ್ನಪ್ಪ ಅವರು ಮಾಲೀಕರೊಂದಿಗೆ ಈ ಬಗ್ಗೆ ಸಂಧಾನ ನಡೆಸಿದ ನಂತರ ಲಾಕೌಟ್ ತೆಗೆಯಲಾಯಿತು. ಕಾರ್ಮಿಕರ ಇತರ ಬೇಡಿಕೆಗಳ ಬಗ್ಗೆ ಮುಂದೆ ಮಾತುಕತೆ ನಡೆಯಲಿದ್ದು; ಕಾರ್ಮಿಕರು ಸೂಚಿಸುವ ಸುಧಾರಣೆಗಳನ್ನು ತರಲು ಮಾಲೀಕರು ಒಪ್ಪಿಕೊಂಡಿದ್ದಾರೆ. ●

ಕವುಕೋಡಿ ಎಸ್ಟೇಟ್ ಕಾರ್ಮಿಕರ ಹೋರಾಟ

ಹಾಸನ ಜಿಲ್ಲೆಯ ಸಕಲೇಶಪುರದ ಕವುಕೋಡಿ ಎಸ್ಟೇಟಿನ ಸುಮಾರು 150 ಜನ ಕಾರ್ಮಿಕರು ತಮ್ಮ ತೋಟದ ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ ಮತ್ತು ದಬ್ಬಾಳಿಕೆಯನ್ನು ವಿರೋಧಿಸಿ, ತಮ್ಮ ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ತಾ॥ 20-5-79 ರಿಂದ 26-5-79ರ ವರೆಗೆ ಅನಿರ್ದಿಷ್ಟಕಾಲದ ಮುಷ್ಕರ ನಡೆಸಿದರು. ನಂತರ ತೋಟ ಕಾರ್ಮಿಕರ ಕಾನೂನಿನಲ್ಲಿರುವ ಸವಲತ್ತುಗಳನ್ನು ಆರು ತಿಂಗಳ ಒಳಗೆ ಹಂತಹಂತವಾಗಿ ಜಾರಿಗೆ ತರುವುದಾಗಿ ಎಸ್ಟೇಟಿನ ಮ್ಯಾನೇಜರ್ ಅವರು ಒಪ್ಪಂದಕ್ಕೆ ಬಂದರು. ನಂತರ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಈ ಮುಷ್ಕರದ ಸಮಯದಲ್ಲಿ ರಿಸರ್ವ್ ಪೋಲೀಸರು, ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಇವರೆಲ್ಲರ ಸಮ್ಮುಖದಲ್ಲಿಯೂ ಕಾರ್ಮಿಕರು ಧೈರ್ಯದಿಂದ ಹೋರಾಡಿದ್ದಾರೆ. ಇದು ಪ್ರಶಂಸಾರ್ಹವಾಗಿದೆ. ●

ಕುಣಿಗಲ್‌ನಲ್ಲಿ ನೀರಿಗೆ ದಲಿತರ ಹೋರಾಟ

ತುಮಕೂರು ಜಿಲ್ಲೆ ಕುಣಿಗಲ್‌ನ ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ಅಭಾವ ಹಲವು ವರ್ಷಗಳಿಂದಲೂ ಇದೆ. ಅದಕ್ಕಲ್ಲೂ ಬಡದಲಿತರು ದೂರದಲ್ಲಿ ಹರಿಯುವ ಕಾಲುವೆಯ ಹೊಂಡುನೀರನ್ನು ತಂದು ಕುಡಿಯುತ್ತಿದ್ದು, ಸರ್ಕಾರ ಮತ್ತು ಪುರಸಭೆಗಳಿಗೆ ನೀರಿನ ಸೌಕರ್ಯ ಒದಗಿಸಲು ಹಲವು ಮನವಿಗಳನ್ನು ಅರ್ಪಿಸಿದ್ದರೂ ಸಹ ಪ್ರಯೋಜನವಾಗಿಲ್ಲ. ಈ ಬೇಡಿಕೆಯನ್ನು ಒತ್ತಾಯಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ತಾ. 28-5-79 ರಂದು ಪ್ರತಿಭಟನಾ ಮುಷ್ಕರವನ್ನು ನಡೆಸಿತು. ಮಲ್ಲಿಪಾಳ್ಯದ ದಲಿತ ಹೆಂಗಸರು ಮಕ್ಕಳು ತಲೆಯ ಮೇಲೆ ಖಾಲಿ ಬಿಂದಿಗೆಗಳನ್ನು ಹೊತ್ತು ಕೆಂಬಾವುಟ ಹಿಡಿದು ಮೆರವಣಿಗೆ ಬಂದು, ತಹಶೀಲ್ದಾರರ ಕಚೇರಿಯ ಎದುರು ಮುಷ್ಕರ ಪ್ರಾರಂಭಿಸಿದರು. ಈ ಹೋರಾಟದ ನಾಯಕತ್ವವನ್ನು ಕಾಂ. ಮಹಮದ್ ದಸ್ತಗೀರ್ ವಹಿಸಿದ್ದರು. ಎರಡು ದಿನಗಳ ಮುಷ್ಕರದ ನಂತರ ತಹಶೀಲ್ದಾರರು ಮತ್ತು ಮುನಿಸಿಪಲ್ ಮುಖ್ಯಾಧಿಕಾರಿಗಳು ನೀರಿನ ಅಭಾವವಿರುವ ಪ್ರದೇಶಗಳಿಗೆ ಭೇಟಿಕೊಟ್ಟು, ತಾತ್ಕಾಲಿಕ ನೀರಿನ ವ್ಯವಸ್ಥೆಯ ಭರವಸೆ ನೀಡಿದ ನಂತರ ಮುಷ್ಕರ ಅಂತ್ಯಗೊಳಿಸಲಾಯಿತು. ○

ಪ್ಲೈವುಡ್ ಕಾರ್ಮಿಕರ ಸತ್ಯಾಗ್ರಹ

ಹೆಚ್ಚು ಲಾಭಗಳಿಸುವ ಪ್ಲೈವುಡ್ ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರಿಗೆ ಸಿಗುತ್ತಿರುವ ವೇತನ ಬಹಳ ಕಡಿಮೆ. ಕನಿಷ್ಠಕೂಲಿ ನಿಗದಿ ಮಾಡಬೇಕೆಂದು ಕಾರ್ಮಿಕರು ಒತ್ತಾಯಿಸಿದ ನಂತರ ಸರ್ಕಾರವು 1978ರಲ್ಲಿ ಕನಿಷ್ಠ ವೇತನವನ್ನು ಪ್ರಕಟಿಸಿದೆ. ಈ ವೇತನ ಜೂನ್ 1978 ರಿಂದ ಜಾರಿಯಾಗಬೇಕಿತ್ತು. ಆದರೆ ಈ ಪ್ರಕಟಣೆಯಲ್ಲಿ ಕೆಲವು ತಾಂತ್ರಿಕ ದೋಷಗಳಿದ್ದ ಕಾರಣ ಮಾಲೀಕರು ಹೈಕೋರ್ಟಿಗೆ ರಿಟ್ ಹಾಕಿ ತಡೆಯಾಜ್ಞೆ ತಂದರು. ಇದಾಗಿ ಒಂದು ವರ್ಷ ದಾಟಿದರೂ ಈ ತಡೆಯಾಜ್ಞೆ ತೆಗೆಯಲು ಸರ್ಕಾರ ಪ್ರಯತ್ನಿಸುತ್ತಿಲ್ಲ.

ಸರ್ಕಾರವು ತಡೆಯಾಜ್ಞೆಯನ್ನು ತೆಗೆಸಲು ಮುಂದಾಗಬೇಕು ಮತ್ತು ಅಂದಿನಿಂದ ಈವರೆಗಿನ ಪರಿಸ್ಥಿತಿಗೆ ತಾತ್ಕಾಲಿಕ ಪರಿಹಾರ ಕೊಡಬೇಕು ಎಂದು ಒತ್ತಾಯಿಸಲು ದ.ಕ. ಜಿಲ್ಲೆ ಪ್ಲೈವುಡ್ ಕೆಲಸಗಾರರ ಸಂಘದ ನೇತೃತ್ವದಲ್ಲಿ 26-5-79 ರಂದು ಮಂಗಳೂರಿನ ಅಸಿಸ್ಟೆಂಟ್ ಲೇಬರ್ ಕಮೀಷನರ್ ಕಚೇರಿಯ ಎದುರು ಸತ್ಯಾಗ್ರಹ ನಡೆಸಿ ಮನವಿ ಅರ್ಪಿಸಲಾಯಿತು. ಸತ್ಯಾಗ್ರಹಕ್ಕೆ ಹಂಗಾರಕಟ್ಟೆ ಮತ್ತು ಸೆಟ್ಟಣದ ಪ್ಲೈವುಡ್ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ○

ಕುದುರೆಮುಖದಲ್ಲಿ ಸಭೆ

ಸಿ. ಐ. ಟಿ. ಯು. ವಿನ ಆಶ್ರಯದಲ್ಲಿ ಎಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಷನ್ ಹಾಗೂ ಕುದುರೆಮುಖ ಕನ್‌ಸ್ಟ್ರಕ್ಷನ್ ವರ್ಕರ್ಸ್ ಯೂನಿಯನ್‌ಗಳು ತಾ. 3-6-1979 ರಂದು ಬಹಿರಂಗ ಸಭೆಯನ್ನು ಏರ್ಪಡಿಸಿದ್ದವು.

ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ವಿನ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು, 1970ರ ಮೇ ತಿಂಗಳಲ್ಲಿ ಕಲಕತ್ತಾದಲ್ಲಿ ಸ್ಥಾಪನೆಗೊಂಡ ಸಿ. ಐ. ಟಿ. ಯು. ಕಾರ್ಮಿಕರ ನ್ಯಾಯಬದ್ಧ ಹೋರಾಟದ ಮುಖಂಡತ್ವ ವಹಿಸಿ ಕೆಲವೇ ವರ್ಷಗಳಲ್ಲಿ ಏನೆಲ್ಲಾ ಯಶಸ್ಸನ್ನು ಪಡೆಯಿತು ಎಂಬುದನ್ನು ವಿವರಿಸಿದರು. ಈ ದೇಶದ ಶೋಷಕವರ್ಗಗಳಾದ ಭೂಮಾಲೀಕ ಬಂಡವಾಳಗಾರರಿಗೆ ವಿರುದ್ಧವಾಗಿ ನಡೆಸಿದ ದೀರ್ಘ ಹೋರಾಟದ ಚರಿತ್ರೆಯನ್ನು ನೆನಪಿಸಿಕೊಳ್ಳುತ್ತಾ, ಕಾರ್ಮಿಕ ವರ್ಗವು ಎಲ್ಲಾ ದುಡಿಯುವ ವರ್ಗದ ಜತೆಗೂಡಿ ಕ್ರಾಂತಿ ಪತಾಕೆಯನ್ನು ಹಾರಿಸುವ ದಿನ ದೂರವಿಲ್ಲವೆಂದು ವಿಶ್ವಾಸ ವ್ಯಕ್ತಪಡಿಸಿದರು. ದೇಶದಲ್ಲಿ ನಡೆಯುತ್ತಿರುವ ಪೋಲೀಸರ ಚಳುವಳಿಯನ್ನು ಉಲ್ಲೇಖಿಸುತ್ತ ಮುಕ್ತಮನಸ್ಸಿನಿಂದ ಇಡೀ ಕಾರ್ಮಿಕವರ್ಗ ಅವರಿಗೆ ಬೆಂಬಲ, ಸಹಾನುಭೂತಿಯನ್ನು ವ್ಯಕ್ತಪಡಿಸುವದೆಂದು ಆಶ್ವಾಸನೆ ಕೊಟ್ಟರು.

ಪ. ಬಂಗಾಳದಲ್ಲಿ ಕಾರ್ಮಿಕರು ತಮ್ಮ ಹಿತವನ್ನು ರಕ್ಷಿಸುವ ವಾಮಪಕ್ಷಗಳನ್ನು ಅಧಿಕಾರಕ್ಕೆ ತಂದಿರುವದನ್ನು ನೆನಪಿಸಿಕೊಳ್ಳುತ್ತ, ಇಂದು ಬಂಗಾಳದಲ್ಲಿ ನಡೆಯುವದು ನಾಳೆ ಇಡೀ ಭಾರತದಲ್ಲಿಯೆ ನಡೆಯುವದೆಂದು ಚರಿತ್ರೆಯು ನಮಗೆ ಸ್ಪಷ್ಟಪಡಿಸಿರುತ್ತದೆ ಎಂದರು. ಬ್ರಿಟೀಷರು ಬಂಗಾಳದ ಮೂಲಕ ಇಡೀ ರಾಷ್ಟ್ರವನ್ನು ಆಳಿದ್ದನ್ನು ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿ ಸ್ವಾತಂತ್ರ್ಯ ಸಂಗ್ರಾಮ ಮೊದಲು ಬಂಗಾಳದಲ್ಲಿ ಪ್ರಾರಂಭವಾಗಿದ್ದನ್ನು, ಎಲ್ಲ ಪ್ರಜಾತಂತ್ರ ಸಂಘಟನೆಗಳನ್ನು ಬಗ್ಗುಬಡಿಯುತ್ತ 1972ರಲ್ಲಿ ಇಂದಿರಾಗಾಂಧಿಯವರು ಮೋಸದ ಚುನಾವಣೆ ನಡೆಸಿದ್ದನ್ನು, ಇಡೀ ಭಾರತವು ಕ್ರಮೇಣ ಅನುಭವಿಸಬೇಕಾಗಿ ಬಂದಿರುವದನ್ನು ವಿವರಿಸುತ್ತ, ಇಂದು ದೇಶದ ಎಲ್ಲಾ ಭಾಗಗಳಲ್ಲಿರುವ ಕಾರ್ಮಿಕರು ಹೋರಾಟ ನಡೆಸಿ ಕೇಂದ್ರದಲ್ಲಿ ತಮ್ಮದೇ ಆದ ಸರಕಾರವನ್ನು ತರಲಿ ಎಂದು ಹಾರೈಸಿದರು.

ನಮ್ಮ ರಾಜ್ಯದ ಮುಖ್ಯಮಂತ್ರಿ ದೇವರಾಜ ಅರಸರ ವರ್ಗಹೋರಾಟದ ಪೊಳ್ಳುಘೋಷಣೆಯ ಸಮಾಜವಾದದ ಬಾಡಬಡಿಕೆಯನ್ನು ಖಂಡಿಸುತ್ತ, ಇದು ಕಾರ್ಮಿಕರಿಗೆ ತಪ್ಪುದಾರಿಗೆಳೆಯುವ ಕುತಂತ್ರವೆಂದು ಮಂಗಳೂರಿನ ಸಿ. ಪಿ. ಸಿ. ಕೆಲಸಗಾರರ ಮುಷ್ಕರ, ದಾಂಡೇಲಿ ಪೇಪರ್ ಮಿಲ್ ಕೆಲಸಗಾರರ ಮುಷ್ಕರ ಹಾಗೂ ಹಾನದ ಕಾಫಿ ಕ್ಯೂರಿಂಗ್ ಕೆಲಸಗಾರರ ಮುಷ್ಕರವನ್ನು ನಿಷೇಧಿಸಿದ್ದನ್ನು ನೆನಪಿಸಿಕೊಟ್ಟರು. ಅದೇ ಸಮಯದಲ್ಲಿ ಎಲ್ಲಾ ಸಂಘಟನಾ ಸ್ವಾತಂತ್ರ್ಯವನ್ನು ಕೊಟ್ಟು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಪ. ಬಂಗಾಳದ ವಾಮಪಕ್ಷಗಳ ಸರಕಾರದ ಪ್ರಗತಿಪರ ಕಾರ್ಯಕ್ರಮಗಳನ್ನು ವಿವರಿಸಿದರು. ಕಾರ್ಮಿಕವರ್ಗವು ತನ್ನ ಚಾರಿತ್ರಿಕ ಜವಾಬ್ದಾರಿಯನ್ನು ನಿರ್ವಹಿಸಿ ಹೋರಾಟವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಕೇಳಿಕೊಂಡರು.

ಎಚ್. ಎಸ್. ಸಿ. ಎಲ್. ಕಾರ್ಮಿಕ ಸಂಘಗಳ ಅಖಿಲ ಭಾರತ ಸಮನ್ವಯ ಸಮಿತಿಯ ಸಂಚಾಲಕರಾದ ಭಿಲಾಯಿಯ ಕಾಂ. ಎಸ್. ಎಸ್. ಭಟ್ಟಾಚಾರ್ಯರವರು ಐಕ್ಯಹೋರಾಟದಿಂದ ಕಾರ್ಮಿಕವರ್ಗವು ಮುನ್ನಡೆಯಬೇಕೆಂದು, ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ನಾನಾ ರೀತಿಯ ಕುತಂತ್ರವನ್ನು ಅಪಪ್ರಚಾರವನ್ನು ಮಾಲೀಕವರ್ಗವು ಮಾಡುತ್ತದೆಯೆಂದು, ಇದನ್ನೆಲ್ಲಾ ಲೆಕ್ಕಿಸದೆ ಹೋರಾಡಬೇಕೆಂದು ಕರೆಕೊಟ್ಟರು. ದೇಶದಾದ್ಯಂತ ಕಲ್ಲಿದ್ದಲು ಗಣಿ ಕಾರ್ಮಿಕರು ಐಕ್ಯ ಹೋರಾಟದಿಂದ ತಮ್ಮ ಬೇಡಿಕೆಗಳನ್ನು ಮನ್ನಿಸುವಂತೆ ಮಾಡಿದ್ದನ್ನು ನೆನಪಿಸಿಕೊಟ್ಟರು.

ಸಿ. ಐ. ಟಿ. ಯು. ವಿನ ಕರ್ನಾಟಕ ರಾಜ್ಯಮಂಡಳಿಯ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಮಾತನಾಡುತ್ತ ಕಾರ್ಮಿಕರು ರಾಜಕೀಯ ಪ್ರಜ್ಞೆಯನ್ನು ರೂಢಿಸಿಕೊಂಡು ಮಾನವನಿಂದ ಮಾನವನ ಶೋಷಣೆ ನಡೆಯುವದನ್ನು ತಪ್ಪಿಸಿ, ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಹೋರಾಟ ನಡೆಸಬೇಕೆಂದು ಹೇಳಿದರು.

ಕರ್ನಾಟಕ ಪ್ರೊವಿನ್ಶಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾಂ. ಎ. ಸಿ. ಕೇಶವರು ಕಾರ್ಮಿಕರ ಹೀನಸ್ಥಿತಿಯನ್ನು ವಿವರಿಸುತ್ತ, ಕುದುರೆಮುಖ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ತೋಟಕಾರ್ಮಿಕರು ಸಂಪೂರ್ಣ ಬೆಂಬಲ ಕೊಡುವರು ಎಂಬುದಾಗಿ ಆಶ್ವಾಸನೆ ಕೊಟ್ಟರು.

ಕಾರ್ಮಿಕರ ಪರವಾಗಿ ಕಾಂ. ಜೋನ್, ಕಾಂ. ದಾಮೋದರನ್ ಹಾಗೂ ಕಾಂ. ಬಾಲಕೃಷ್ಣ ಮಾತನಾಡಿದರು.

ಅಧ್ಯಕ್ಷತೆಯನ್ನು ಕಾಂ. ಮೂಸಬ್ಬ ವಹಿಸಿದ್ದರು. ಮೊದಲು ಕಾಂ. ರಾಮದಾಸ್ ಆಚಾರಿ ಎಲ್ಲರನ್ನು ಸ್ವಾಗತಿಸಿದರು. ಕೊನೆಗೆ ಕಾಂ. ಬ್ರಹ್ಮಪ್ರಕಾಶ ವಂದನಾರ್ಪಣೆ ಮಾಡಿದರು.

ಸಭೆಯ ಮೊದಲು ಕಾರ್ಮಿಕರು ಕುದುರೆಮುಖ (ಮಲ್ಲೇಶ್ವರ)ದ ಪ್ರಮುಖ ಬೀದಿಗಳಲ್ಲಿ ಕೆಂಬಾವುಟಗಳನ್ನು ಹಿಡಿದು ಮೆರವಣಿಗೆ ನಡೆಸಿದ್ದರು. ○

5-6-79 ರಿಂದ ಅರಣ್ಯಭೂಮಿ ಸ್ವಾಧೀನಕ್ಕಾಗಿ ಬಡ ರೈತ ಕೂಲಿಗಾರರ ಹೋರಾಟ

ಉ. ಕ. ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಸಾತ್ನಳ್ಳಿ, ಜಾವಳ್ಳಿ, ಜಾಂಬೋಗಾ, ಮೊದಿಲಗೇರಿ, ಅಜಗಾಂವ, ಅಸೆಕಟ್ಟಾ, ಆಲೂರ, ಕಾಟಗೇರಾ, ಕಾಸಾಪೂರ, ಡೊಮಗೇರಾ ಹಳ್ಳಿಗಳಿಂದ ಬಂದ ಬಡ ರೈತ ಕೂಲಿಗಾರ ಪ್ರತಿನಿಧಿಗಳು 21-5-79 ರಂದು ಸಾತ್ನಳ್ಳಿಯಲ್ಲಿ ಸೇರಿ ಸಂಘಟನೆ ಮತ್ತು ಬೇಡಿಕೆಗಳ ಈಡೇರುವಿಕೆಗಾಗಿ ಹೋರಾಟ ನಡೆಸುವ ತೀರ್ಮಾನವನ್ನು ಮಾಡಿದರು. ಅರಣ್ಯಭೂಮಿಯಲ್ಲಿ ವಾಸವಾಗಿರುವ ಬಡರೈತ ಕೂಲಿಗಾರರನ್ನು ಅವರು ಕೃಷಿ ಮಾಡುತ್ತಿರುವ ಅರಣ್ಯ ಭೂಮಿಯಿಂದ ಹೊಡೆದೋಡಿಸಿ ಅವರ ಮೇಲೆ ಪೋಲೀಸ್ ಮೊಕದ್ದಮೆ ಹೂಡುವುದನ್ನು ನಿಲ್ಲಿಸಬೇಕೆಂದು ಮತ್ತು ಭೂಹೀನರಿಗೆ ಅರಣ್ಯ ಹೆಚ್ಚುವರಿ ಭೂಮಿ ವಿತರಣೆಯಾಗಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟು ಹೋರಾಡುವ ನಿರ್ಣಯ ಮಾಡಲಾಯಿತು. 28-5-79 ರಂದು ಬಡರೈತ ಕೂಲಿಗಾರರ ಬೃಹತ್ ಮತಪ್ರದರ್ಶನವನ್ನು ಹಳಿಯಾಳ ತಾಲ್ಲೂಕು ಕಛೇರಿಯೆದುರು ನಡೆಸಲೂ ತೀರ್ಮಾನಿಸಲಾಯಿತು.

ಹೋರಾಟದ ಮೊದಲ ಹಂತವಾದ ಈ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. 28ರಂದು ಸುಮಾರು 2000 ಮಂದಿ ಬಡರೈತ ಕೂಲಿಗಾರರು ಮೆರವಣಿಗೆಯಲ್ಲಿ ಹೋಗಿ ಹಳಿಯಾಳ ತಾಲ್ಲೂಕು ಕಛೇರಿಯೆದುರು ಭಾರಿ ಮತಪ್ರದರ್ಶನವನ್ನು ನಡೆಸಿದರು. ಫಾರೆಸ್ಟ್ ಡಿವಿಜನಲ್ ಅಧಿಕಾರಿಗಳ ಕಛೇರಿಯೆದುರು ಮತಪ್ರದರ್ಶನವು ನಡೆಯಿತು. ಪ್ರಾಂತ ರೈತಸಂಘದ ಉಪಾಧ್ಯಕ್ಷರಾದ ಕಾಂ. ಎನ್. ಜಿ. ಮ್ಹಾಳಸೇಕರ ಮತ್ತು ಕಾರ್ಮಿಕರ ಮುಂದಾಳು ಕಾ. ಆರ್. ಜಿ. ಸ್ಥಳೇಕರ್ ಇವರ ಮುಖಂಡತ್ವದಲ್ಲಿ ನಡೆದ ಕಾರ್ಯಕ್ರಮದ ಅಂಗವಾಗಿ ತಹಶೀಲ್ದಾರ ಮತ್ತು ಫಾರೆಸ್ಟ್ ಅಧಿಕಾರಿಗಳವರೆಗೆ ಮನವಿಯ ಪತ್ರಗಳನ್ನು ಅರ್ಪಿಸಲಾಯ್ತು.

ಸುತ್ತುಮುತ್ತಲಿನ ಸುಮಾರು 17 ಹಳ್ಳಿಗಳಿಗೆ ಸೇರಿದ ಸಹಸ್ರಾರು ಮಂದಿ ಭೂರಹಿತ ಬಡರೈತ ಕೂಲಿಗಾರರು 5.6.79 ರಿಂದ ಅರಣ್ಯಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಕಾರ್ಯಕ್ರಮವನ್ನು ಹಾಕಲು ತೀರ್ಮಾನಿಸಲಾಯ್ತು. ಈ ಕಾರ್ಯಕ್ರಮದ ಪ್ರಕಾರ ಸುಮಾರು 4 ಸಹಸ್ರ ಎಕರೆ ಸರಕಾರಿ ಬಂಜರುಭೂಮಿಯನ್ನು ಸ್ವಾಧೀನಗೊಳಿಸಿ, ಉಳುಮೆ ಮಾಡುವ ನಿರ್ಣಯವನ್ನು ಮಾಡಲಾಯ್ತು.

5-6-79 ಭೂಸ್ವಾಧೀನ ಚಳುವಳಿಯ ಅಂಗವಾಗಿ 4-6-79 ರಂದು ಬೆಳಿಗ್ಗೆ ಹಳಿಯಾಳದಲ್ಲಿ 17 ಹಳ್ಳಿಗಳ ಮತ್ತು ಸುತ್ತಮುತ್ತಲಿನ ಬಡರೈತ ಕೂಲಿಗಾರರ ಬೃಹತ್ ಸಭೆಯು ಜರುಗಿತು. ○

ಹೋಟೆಲ್ ಕಾರ್ಮಿಕರ ಸಂಘಕ್ಕೆ ಆಯ್ಕೆ

ತಾ. 1-6-79ರಂದು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆ ಕಾಂ. ರಾಜನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಚಟುವಟಿಕೆಗಳ ಬಗ್ಗೆ ಚರ್ಚೆಯಾದ ನಂತರ ಸಂಘಕ್ಕೆ ಕೆಳಕಂಡವರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಲಾಯಿತು.

ಅಧ್ಯಕ್ಷ : ಕಾಂ. ಟಿ. ಎಸ್. ಅನಂತರಾಮನ್, ಎಂ. ಎಸ್ಸಿ, ಎಲ್. ಎಲ್. ಬಿ.

ಉಪಾಧ್ಯಕ್ಷರು : ಕಾಂ. ಇಕ್‌ಬಾಲ್ ಹುಸೇನ್, ಬಿ. ಎ, ಎಲ್. ಎಲ್. ಬಿ. ಕಾಂ. ಅಡವೀಶಯ್ಯ.

ಪ್ರಧಾನ ಕಾರ್ಯದರ್ಶಿ : ಕಾಂ. ವಿ. ಜೆ. ಕೆ. ನಾಯರ್, ಬಿ. ಎ, ಎಲ್. ಎಲ್. ಬಿ.

ಸಹ ಕಾರ್ಯದರ್ಶಿ : ಕಾಂ. ಕೆ. ಇ. ನಾರಾಯಣ್.

ಸಹಾಯಕ ಕಾರ್ಯದರ್ಶಿ : ಕಾಂ. ಹಂಜಾ

ಖಜಾಂಚಿ : ಕಾಂ. ಅಯ್ಯಪ್ಪನ್.

ಇವರ ಜೊತೆ ಹತ್ತು ಜನರ ಕಾರ್ಯಕಾರಿ ಸಮಿತಿಯನ್ನು ಸಹಾ ಇದೇ ಸಮಯದಲ್ಲಿ ರಚಿಸಲಾಯಿತು. ○

ಅಳಪೆ ಬೀಡಿಕಾರ್ಮಿಕರ ಸಭೆ

ಮಂಗಳೂರಿನ ಪಟ್ಟಿವನೊಗ್ರು ವಿನಲ್ಲಿ ಅಳಪೆ ಪ್ರದೇಶ ಬೀಡಿಕಾರ್ಮಿಕರ ಸಭೆಯು ತಾ. 27-5-79ನೇ ತಾರೀಕು ಪಂಚಾಯತಿ ಚೇರ್‌ಮನ್ ಜೆ. ಸದಾಶಿವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಪಂಚಾಯತಿ ಸದಸ್ಯ ರಾಮಣ್ಣ ಶೆಟ್ಟಿಯವರು ಸ್ವಾಗತಿಸಿದ ನಂತರ, ಕಾರ್ಯದರ್ಶಿ ರಂಗಪ್ಪ ಸಾಲಿಯಾನ್ ಅವರು ಬೀಡಿ ಕಾರ್ಮಿಕರ ಹೋರಾಟದ ಬಗ್ಗೆ ವಿವರಿಸಿದರು. ತಮ್ಮ ಸೌಲಭ್ಯಗಳ ಈಡೇರಿಕೆಗಾಗಿ ಸಾಮೂಹಿಕ ಚಳುವಳಿ ನಡೆಸುವಂತೆ ರಾಜ್ಯ ಬೀಡಿಕಾರ್ಮಿಕರ ಫೆಡರೇಶನ್ನಿನ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಕರೆಯಿತ್ತರು. ಕೋಟೆಕಾರ್ ಸರ್ಕಲಿನ ಬೀಡಿ ಯೂನಿಯನ್‌ನ ಕಾರ್ಯದರ್ಶಿ ಯು. ಬಿ. ಲೋಕಯ್ಯ ಅವರು ಕಾರ್ಮಿಕರ ಸಂಘಟನೆಯ ಬಗ್ಗೆ ವಿವರಿಸಿದರು.

ಮಾರ್ಕ್ಸ್‌ವಾದಿಗಳ ವಿಜಯ

[1ನೇ ಪುಟದಿಂದ]

ಯಾಗಿದ್ದು, ಇನ್ನೋರ್ವ ಪಕ್ಷದ ಬೆಂಬಲಿತರೂ ಆಯ್ಕೆಯಾಗಿರುವರು. ಪಕ್ಷದ ಅಭ್ಯರ್ಥಿಗಳಾಗಿ ವಿಜಯಿಗಳಾದ ಕಾಂ. ಅಬ್ದುಲ್ ಆಲಿ ಯಾನೆ ಬಡೇ ಸಾಹೇಬ್‌ರವರು ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದು, ವಿಜಯಿಗಳಾದ 15 ಮಂದಿಗಳಲ್ಲಿ ಅತ್ಯಂತ ಅಧಿಕ ಬಹುಮತವನ್ನು ಪಡೆದಿರುವರು. ಕಾಂ. ಸಾಬಿರಾಬಿ ಮತ್ತು ಕಾಂ. ಎಸ್. ಜಿ. ಯೂನಸ್‌ಖಾನ್‌ರವರುಗಳು ವಿಜಯಿಗಳಾದ ಇನ್ನಿಬ್ಬರು ಅಭ್ಯರ್ಥಿಗಳು. ಪಕ್ಷದ ಬೆಂಬಲಿತರಾಗಿ ವಿಜಯಿ ಆದವರು ಶ್ರೀ ಕೆ. ವಿ. ರಾಮಣ್ಣನವರಾಗಿರುವರು. ಕುಣಿಗಲ್‌ನಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷವು ಪುರಸಭೆಯನ್ನು ತನ್ನ ವಶ ಮಾಡಲು ಮಾಡಿದ ಪ್ರಯತ್ನಗಳೆಲ್ಲಾ ಮಣ್ಣುಪಾಲಾಗಿದೆ. ಒಟ್ಟು 15 ಸ್ಥಾನಗಳ ಪೈಕಿ ಇಂದಿರಾ ಕಾಂಗ್ರೆಸ್ಸಿಗೆ 6 ಸ್ಥಾನಗಳು ದೊರೆತಿದ್ದು, ಇಲ್ಲಿ ಇಂದಿರಾ ಕಾಂಗ್ರೆಸ್ಸೇತರರು ಬಹುಮತ ಪಡೆದಿರುವರು.

ಪುರಸಭಾ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದಲ್ಲೆಲ್ಲಾ ಉತ್ತಮ ಫಲಿತಾಂಶ ದೊರೆತದ್ದು ಹೆಮ್ಮೆಯ ವಿಚಾರ. ದಾಂಡೇಲಿಯಲ್ಲಿ ಪ್ರಚಂಡ ವಿಜಯವು ದಾಂಡೇಲಿ ಮತ್ತು ಸುತ್ತಮುತ್ತಲಿನ ರೈತ-ಕಾರ್ಮಿಕರ ಹೋರಾಟಗಳನ್ನು ಬೆಳೆಸುವ ಹಕ್ಕಿಗೆ ಹೊಸ ಸ್ಫೂರ್ತಿಯನ್ನೀಯುವುದು ನಿಶ್ಚಯ. ವಿಜಯಿ ಅಭ್ಯರ್ಥಿಗಳಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಪರವಾಗಿ ರಾಜ್ಯ ಸಮಿತಿ ಕಾರ್ಯದರ್ಶಿಯವರು ಅಭಿನಂದನೆಗಳನ್ನು ಸಲ್ಲಿಸಿರುವರು. ●

ಹಳಿಯಾಳ ಭೂಸ್ವಾಧೀನ ಚಳುವಳಿ ಗೋಲಿಬಾರಿಗೆ ರೈತನ ಬಲಿ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ 5-6-79 ರಿಂದ ಭೂಸ್ವಾಧೀನ ಚಳುವಳಿಯು ಶಾಂತಯುತವಾಗಿ ಪ್ರಾರಂಭವಾಗಿತ್ತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯಸಮಿತಿ ಸದಸ್ಯ ಮತ್ತು ರೈತ-ಕಾರ್ಮಿಕ ಮುಂದಾಳು ಕಾಂ. ಆರ್. ಜಿ. ಸ್ಥಳೇಕರ ಮತ್ತು ಹತ್ತಾರು ರೈತರ ಬಂಧನವಾಯಿತು. ಇದನ್ನು ಪ್ರತಿಭಟಿಸಿ ಹಳಿಯಾಳ ಬಂದಿಗೆ ಕರೆ ನೀಡಲಾಯಿತು. ಬಂದಿನ ದಿನದಂದು ಪೋಲೀಸರು ಶಾಂತಯುತವಾಗಿ ಪ್ರತಿಭಟಿಸುವ ಸಾವಿರಾರು ಮಂದಿ ಬಡ ರೈತ-ಕೂಲಿಗಾರರ ಮೇಲೆ ಗೋಲಿಬಾರು ಮತ್ತು ಲಾಠಿಪ್ರಹಾರ ನಡೆಸಿದರು. ಪರಿಣಾಮವಾಗಿ ಒಬ್ಬ ರೈತ ಸಾವಿಗೀಡಾಗಬೇಕಾಗಿ ಬಂತು. ಇತರ ಹಲವರಿಗೆ ತೀವ್ರ ಗಾಯಗಳೂ ಆಗಿವೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ, ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯಸಮಿತಿ ಮತ್ತು ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಸಮಿತಿಗಳು ಪೋಲೀಸರ ಅಮಾನುಷಕತೆಯನ್ನೂ, ಗೋಲಿಬಾರನ್ನೂ ತೀವ್ರವಾಗಿ ಖಂಡಿಸಿವೆ. ಮೃತರ ಕುಟುಂಬಕ್ಕೆ ಪರಿಹಾರ ಕೊಡಲೂ, ಇದಕ್ಕೆ ಕಾರಣರಾದ ಪೋಲೀಸು ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಲೂ ಬಡಜನರು ವಾಸವಾಗಿರುವ ಸರಕಾರಿ ಭೂಮಿಯನ್ನು ಕೂಡಲೇ ಖಾಯಂಗೊಳಿಸಲೂ ಮತ್ತು ಕೃಷಿ ಯೋಗ್ಯ ಸರಕಾರಿ ಭೂಮಿ ಹಾಗೂ ಭೂಮಾಲಕರೂ, ಪ್ಲಾಂಟೇಷನ್ ಮಾಲಕರೂ ಅಕ್ರಮವಾಗಿ ಸ್ವಾಧೀನವಿರಿಸಿರುವ ಸರಕಾರಿ ಭೂಮಿಯನ್ನು ಭೂರಹಿತ ಬಡಜನರಿಗೆ ಕೂಡಲೇ ಹಂಚಲೂ ಸರಕಾರವನ್ನು ಒತ್ತಾಯಿಸಿವೆ.

ಹಳಿಯಾಳ ರೈತಹೋರಾಟಕ್ಕೆ ಬೆಂಬಲವಾಗಿಯೂ, ಪೋಲೀಸರ ಅಮಾನುಷಕತೆಯನ್ನು ಪ್ರತಿಭಟಿಸಿಯೂ ಎಲ್ಲಾ ಕಡೆ ಪ್ರತಿಭಟನಾ ಮತ್ತು ಸೌಹಾರ್ದ ಹೋರಾಟ ಕಾರ್ಯಕ್ರಮ ಹಾಕಲು ಈ ಮೂಲಕ ಕರೆ ನೀಡಲಾಗಿದೆ. ಸರಕಾರವು ಬಡಜನರಿಗೆ ಭೂಮಿ ಹಂಚದಿದ್ದಲ್ಲಿ ರಾಜ್ಯದಾದ್ಯಂತ ಸಂಘಟಿತ ಮತ್ತು ಶಾಂತಯುತವಾದ ಭೂ ಆಕ್ರಮಣ ಚಳುವಳಿಯನ್ನು ನಡೆಸಲಾಗುವುದು ಎಂದೂ ಪ್ರಾಂತ ರೈತಸಂಘ ಎಚ್ಚರಿಕೆಯನ್ನಿತ್ತಿದೆ.

ಮೃತರ ಕುಟುಂಬಕ್ಕೆ ಪಕ್ಷ, ಸಿ.ಐ.ಟಿ.ಯು ಮತ್ತು ಪ್ರಾಂತ ರೈತ ಸಂಘಗಳ ರಾಜ್ಯ ಸಮಿತಿಗಳು ತಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತವೆ.

ಕೆಲವು ಯಾಂತ್ರಿಕ ತೊಂದರೆಗಳಿಂದಾಗಿ ಪತ್ರಿಕೆಯು ಪ್ರಕಟಗೊಳ್ಳುವುದು ತಡವಾದುದಕ್ಕೆ ವಿಷಾದಿಸುತ್ತೇವೆ. ಓದುಗರೂ, ಏಜೆಂಟರುಗಳೂ ಸಹಕರಿಸಬೇಕಾಗಿ ವಿನಂತಿ.

ಸಂಪಾದಕ

ಶಿರಸಿ ರೈತರ ಹೋರಾಟ

ಉ. ಕ. ಜಿಲ್ಲೆಯ ಶಿರಸಿಯಲ್ಲಿ 28-8-79 ರಂದು ಸಂಜೆ ತಾಲ್ಲೂಕು ರೈತ ಸಂಘದ ನೇತೃತ್ವದಲ್ಲಿ ಮತ ಪ್ರದರ್ಶನ ನಡೆಯಿತು. ಸಂಜೆ ನಾಲ್ಕು ಗಂಟೆಗೆ ಜೋರಾಗಿ ಬರುತ್ತಿದ್ದ ಮಳೆಯನ್ನು ಲೆಕ್ಕಿಸದೆ ರೈತರು ಮೆರವಣಿಗೆಯಲ್ಲಿ ತಾಲ್ಲೂಕು ಕಛೇರಿಗೆ ತೆರಳಿ, ಮನವಿಯನ್ನು ತಹಶೀಲ್ದಾರರವರಿಗೆ ಅರ್ಪಿಸಿದರು. ಉಳುವ ರೈತನಿಗೆ ಕೂಡಲೇ ಜಮೀನಿನ ಒಡೆತನ ದೊರೆಯಬೇಕೆಂಬ ಮತ್ತು ಇತರೇ ಬೇಡಿಕೆಗಳು ಮನವಿ ಪತ್ರದಲ್ಲಿ ಸೇರಿದ್ದುವು. ತಹಶೀಲ್ದಾರರು ರೈತರನ್ನುದ್ದೇಶಿಸಿ ಮಾತನಾಡಿ, ಬೇಡಿಕೆಗಳ ಬಗ್ಗೆ ಗಮನ ಹರಿಸುವುದಾಗಿ ತಿಳಿಸಿದರು. ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಬಂಗಾರೇಶ್ವರ ಕಿರಿಯಾ ಗೌಡಾ, ಅಧ್ಯಕ್ಷ ಕಾಂ. ಎಂ. ಎಸ್. ಧಾರೇಶ್ವರ ಮೊದಲಾದವರು ನೇತೃತ್ವ ಕೊಟ್ಟ ಪ್ರದರ್ಶನದಲ್ಲಿನ ರೈತರು ಮುಂದೆ ಹೋರಾಟವನ್ನು ತೀವ್ರಗೊಳಿಸಲೂ ತೀರ್ಮಾನಿಸಿದರು.

ಬಹಿರಂಗ ಸಭೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಬೆಂಗಳೂರು ನಗರ ಶಾಖೆ ತಾ. 3-6-79 ರಂದು ಸಂಜೆ ಸಿಟಿಮಾರ್ಕೆಟ್ ಬಳಿ ಪಕ್ಷದ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಕುರಿತು ಕಾಂ. ಎಸ್. ಸೂರ್ಯನಾರಾಯಣರಾವ್‌ರವರು ಮಾತನಾಡಿದರು. ಹಳ್ಳಿಗಳಲ್ಲಿ ಅಸಂಘಟಿತ ಕಾರ್ಮಿಕರು ಹಾಗೂ ರೈತರ ಸಮಸ್ಯೆಗಳ ಬಗ್ಗೆ ಕಾಂ. ಮುಗುವಾಳಪ್ಪನವರು ಸಭಿಕರಿಗೆ ಮನವರಿಕೆ ಮಾಡಿಕೊಟ್ಟರು. ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕಾಂ. ಸುಬ್ರಮಣಿಯವರು ಕಾರ್ಮಿಕರ ಹಲವಾರು ಸಮಸ್ಯೆಗಳು, ಅವರಲ್ಲೂ ಆಟೋ ಚಾಲಕರ ಸಮಸ್ಯೆಗಳ ಬಗ್ಗೆ ಸಭೆಗೆ ವಿವರಿಸಿದರು. ಕಾಂ. ಜಗನ್ನಾಥ್‌ರವರು ಮಾತನಾಡುತ್ತಾ ಹಳ್ಳಿಗಳಲ್ಲಿ ಎಚ್ಚೆತ್ತ ರೈತರು ನಡೆಸುತ್ತಿರುವ ಹೋರಾಟಗಳನ್ನು ಯಶಸ್ವಿಗೊಳಿಸಲು ಎಲ್ಲರ ಸಹಕಾರ ಅಗತ್ಯವೆಂದು ಹೇಳಿ, ಪೋಲೀಸ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಈಗಿನ ಮನೋಭಾವ ಬದಲಾಗದಿದ್ದರೆ, ಜನತೆಯೇ ಅವರನ್ನು ದಾರಿಗೆ ತರಬೇಕಾಗುತ್ತದೆ ಎಂದರು.

ನಗರ ಶಾಖೆಯ ಕಾರ್ಯದರ್ಶಿ ಕಾಂ. ಐಯ್ಯಪ್ಪನ್‌ರವರು ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ●

ಸಂಪಾದಕೀಯ

[1ನೇ ಪುಟದಿಂದ]

ಈ ಬಗ್ಗೆ ಹಲವು ಆದೇಶಗಳೂ ಹೋಗಿವೆ. ಬಹಳ ಕಡೆ ಬಡ ಭೂಹೀನರನ್ನು ಹೊಡೆದೋಡಿಸಲಾಗಿದೆ. ಬ್ರಿಟೀಷರ ಕಾಲದಿಂದಲೇ ಸರಕಾರಿ ಭೂಮಿಯಲ್ಲಿ ವಾಸಮಾಡಿಕೊಂಡು ಬಂದ ಬಡ ಜನರ ಭೂಮಿ ಇನ್ನೂ ಖಾಯಂ ಆಗಿಲ್ಲ. ಲಕ್ಷಾಂತರ ಮಂದಿ ಬಡ ಜನರು ರೆವಿನ್ಯೂ ಇಲಾಖೆಯ ಮೋಸದಿಂದ ಬೆಂದು ಬಡವಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಖಾಯಂಗೊಳಿಸಲಾಗಿದೆಯೆಂಬ 2·81ಲಕ್ಷ ಎಕರೆ ಭೂಮಿಯಲ್ಲೂ ಹೆಚ್ಚಿನ ಲಾಭ ಜಮೀನು ಮೊದಲೇ ಇರುವವರಿಗೇ ಆಗಿರುವುದು ಸ್ಪಷ್ಟ. ಗ್ರಾಮ ಮತ್ತು ತಾಲ್ಲೂಕು ಮಟ್ಟದ ಅನುಭವಗಳಿಂದ ಇದು ರುಜುವಾಗುವುದು. ಕಾಫಿತೋಟ ಮಾಲೀಕರು ಅಕ್ರಮವಾಗಿ ಸ್ವಾಧೀನವಿಟ್ಟುಕೊಂಡಿರುವ ಭೂಮಿಯನ್ನು ಹೇಗೆ ಬಿಡುಗಡೆ ಮಾಡುವುದು ಎಂಬುದರ ಬಗ್ಗೆ ಯೋಚಿಸುತ್ತಲಿರುವೆವು ಎಂದಷ್ಟೆ ಸಚಿವರು ಹೇಳಿರುವರು. ಇದು ಯೋಚನೆಯ ಹಂತದಲ್ಲೆ ಇರುವಂತಾಗುವುದೆಂಬುದರಲ್ಲಿ ಸಂಶಯವಿಲ್ಲ.

ದುಡಿಯುತ್ತಿರುವ, ದುಡಿಯಲು ಮನಸ್ಸಿರುವ ಎಲ್ಲಾ ಬಡರೈತ ಕೂಲಿಗಾರರೂ ಸ್ವಾಧೀನದಲ್ಲಿಟ್ಟುಕೊಂಡಿರುವ ಸರಕಾರಿ ಭೂಮಿಯನ್ನು ಕೂಡಲೇ ಖಾಯಂಗೊಳಿಸುವುದು, ಉಳಿದವರಿಗೆ ಕೃಷಿಯೋಗ್ಯ ಸರಕಾರಿ ಭೂಮಿಯನ್ನೂ, ಪ್ಲಾಂಟೇಷನ್ ಮಾಲೀಕರು ಅಕ್ರಮವಾಗಿ ಇಟ್ಟುಕೊಂಡಿರುವ ಸರಕಾರಿ ಭೂಮಿಯನ್ನು ಸ್ವಾಧೀನಪಡಿಸಿ ಹಂಚಿಕೊಡುವ ಕಾರ್ಯಕ್ರಮವನ್ನೂ ಸರಕಾರವು ಸಾಧ್ಯವಾದಲ್ಲಿ ಮಾಡಲಿ. ಭ್ರಷ್ಟಾಚಾರವನ್ನು, ಜನತೆಯ ಸಹಕಾರದಿಂದ ನಿರ್ಮೂಲವಮಾಡಲು ಪ್ರಯತ್ನಿಸಲಿ. ಸರಕಾರವು ಈ ಕ್ರಮಗಳನ್ನು ವಹಿಸಲು ಬಡರೈತ ಕೂಲಿಗಾರರು ರಾಜ್ಯದಾದ್ಯಂತ ತೀವ್ರ ಸಂಘಟಿತ ಚಳವಳಿಯನ್ನು ನಡೆಸಲು ಮುಂದಾಗಬೇಕಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಅಲ್ಲಲ್ಲಿ ಪ್ರಾರಂಭವಾಗಿರುವ ಭೂಮಿ ಆಕ್ರಮಣ ಚಳವಳಿಯನ್ನು ಸಂಯುಕ್ತವಾಗಿ ರಾಜ್ಯದಾದ್ಯಂತ ಬೆಳೆಸಬೇಕಾಗಿದೆ. ●

ಪರಿಸರ

ಪೌಷ್ಟಿಕ ಆಹಾರಾಂಶದ ಕೊರತೆಯಿಂದಾಗಿ ಇಂಡಿಯಾ ದೇಶದಲ್ಲಿ ಪ್ರತಿ ವರ್ಷ ಒಂದು ಲಕ್ಷ ಮಕ್ಕಳು 5 ವರ್ಷದ ಒಳಗೇ ಸಾಯುತ್ತಿದ್ದಾರೆ. ಇಂತಹ ದೇಶವೊಂದರಲ್ಲಿ ಕಳೆದ 30 ವರ್ಷಗಳಿಂದ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷದವರಿಗೆ ಮತ್ತು ಈಗ ಆಡಳಿತ ನಡೆಸುತ್ತಿರುವ ಜನತಾ ಪಕ್ಷದವರಿಗೆ ಜನಗಳ ಜೀವಕ್ಕಿಂತಲೂ ದನಗಳ ಜೀವದ ಮೇಲೆ ಹೆಚ್ಚು ಕಳಕಳಿ ಇರುವಂತಿದೆ.

ಲಂಡನ್ ವಾರಪತ್ರಿಕೆ
—'ಮಿಲಿಟೆಂಟ್'ನಲ್ಲಿ ರೋಜರ್ ಸಿಲ್ವರ್‌ಮನ್

ಧರ್ಮಾಂಧತೆ ಹಾಗೂ ಮೂಢನಂಬಿಕೆಗಳನ್ನು ಉಳಿಸಿ-ಬೆಳೆಸುವವರ ಕೈಗೆ (ಆರ್.ಎಸ್.ಎಸ್.) ದೇಶದ ಆಡಳಿತವು ಜಾರಿಹೋಗುತ್ತಿದೆಯೇನೋ ಎಂದು ನನಗೆ ಭಯವಾಗುತ್ತಿದೆ.

—ಮಧುಲಿಮಯೆ
(ಜನತಾಪಕ್ಷದ ಪ್ರಧಾನ ಕಾರ್ಯದರ್ಶಿ)

1959ರಲ್ಲಿ ಇ.ಎಂ.ಎಸ್. ನಂಬೂದಿರಿಪಾದ್ ಅವರ ನೇತೃತ್ವದಲ್ಲಿದ್ದ ಕಮ್ಯುನಿಸ್ಟ್ ಪಕ್ಷದ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್ ಪಕ್ಷವು ಅಮೆರಿಕದ ಸಿ.ಐ.ಎ. ಹಣವನ್ನು ಪಡೆದು ಯಶಸ್ವಿಯಾಯಿತು.

—'ಸಂಡೆ' ವಾರಪತ್ರಿಕೆಯಲ್ಲಿ ಕೇವಲ್ ವರ್ಮ

ತುರ್ತುಪರಿಸ್ಥಿತಿಯ ಅತಿರೇಕಗಳನ್ನು ವಿಚಾರಣೆ ಮಾಡಲು ಕೇಂದ್ರ ಸರ್ಕಾರವು ರಚಿಸುತ್ತಿರುವ ವಿಶೇಷ ಕೋರ್ಟುಗಳನ್ನು ವಿರೋಧಿಸಬೇಕೆಂದು ಕಾಂಗ್ರೆಸ್ (ಐ) ಅಧ್ಯಕ್ಷೆ ಇಂದಿರಾಗಾಂಧಿಯವರು ಕೊಟ್ಟಿದ್ದ ಕರೆಗೆ ಮೇ 16ರಂದು ದಿಲ್ಲಿಯಲ್ಲಿ ಕೇವಲ 30 ಸಾವಿರ ಜನರು ಓಗೊಟ್ಟಿದ್ದರು. ಇಂದಿರಾಗಾಂಧಿಯವರು ತಮ್ಮ ರಾಜಕೀಯ ಜೀವನದಲ್ಲೇ ರಾಜಧಾನಿಯಲ್ಲಿ ಇಷ್ಟೊಂದು ಕಡಿಮೆ ಸಂಖ್ಯೆಯ ಜನರನ್ನು ಉದ್ದೇಶಿಸಿ ಮಾತನಾಡಿರುವುದು ಇದೇ ಪ್ರಥಮ. ಈ ಸಭೆ ಅವರ ಮುಖಭಂಗವೇ ಸರಿ.

'ಪ್ರಜಾವಾಣಿ' ವರದಿ

ಬಲಕಮ್ಯುನಿಸ್ಟ್ ಪಕ್ಷದ ನಾಯಕರು ಯಾವಾಗಲೂ ತಮ್ಮ ಮಿತ್ರರ ಬೆನ್ನಿಗೆ ಚೂರಿ ಹಾಕಿದ್ದಾರೆ ಮತ್ತು ಹಾಕುವಂತಹವರು.

—ಎ. ಆರ್. ಅಂಟುಲೆ
ಕಾಂಗ್ರೆಸ್ (ಐ) ಸಂಸತ್ ಸದಸ್ಯ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053. Editorial and managerial office : L-56, K. V. Temple Street, Sultanpet, Bangalore-560 053.